ಮಾನಸಿ

ಫೆಬ್ರವರಿ : 2002

ತಿಂಗಳ ಪತ್ರಿಕೆ



ಮಾನಸ

ತಿಂಗಳ ಪತ್ರಿಕೆ

ಸಂಪುಟ : 20 ಸಂಚಿಕೆ : 2

ಫೆಬ್ರವರಿ : 2002

ವಿಳಾಸ
"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067
ಇ-ಮೈಲ್ : manasapathrike@yahoo.co.in

ಸೂಚನೆ : ಬಿಡಿ ಪ್ರತಿ **5-00** ರೂ.
ವಾರ್ಷಿಕ ಚಂದಾ **50-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067



ಸಂಪಾದಕೀಯ

ಇಡೀ ವಿಶ್ವವೇ ಗ್ರಾಮವನ್ನಾಗಿಸುತ್ತೇವೆಂಬ ಜಾಗತೀಕರಣದ ನಿಜ ಬಣ್ಣ ಈಗ ಎಲ್ಲೆಡೆ ಬಯಲಾಗುತ್ತಿದೆ. ಜಾಗತೀಕರಣವೆಂಬ ಮಾಯಾವಿ ರಕ್ಕಸನ ಹಿಡಿತಕ್ಕೆ ತತ್ತರಿಸುತ್ತಿರುವವರು ಈ ದೇಶದ ದಲಿತರು, ಆದಿವಾಸಿಗಳು, ಮಹಿಳೆಯರು. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 6,000ಕ್ಕಿಂತಲೂ ಹೆಚ್ಚಿನ ಗುತ್ತಿಗೆ ಪೌರಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಪಾಲಿಕೆಯು ಸ್ವಚ್ಛತಾ ಕಾರ್ಯವನ್ನು ಗುತ್ತಿಗೆಯವರಿಗೆ ನೀಡಿ 10 ವರ್ಷವಾಗಿದೆ. ಗುತ್ತಿಗೆ ಪೌರಕಾರ್ಮಿಕರಲ್ಲಿ 80%ಕ್ಕಿಂತ ಹೆಚ್ಚಿನವರು ದಲಿತರು ಮತ್ತು ಮಹಿಳೆಯರು. ಹಾಗಾಗಿ ಇಲ್ಲಿ ವರ್ಗ, ಜಾತಿ, ಲಿಂಗ ಮೂರು ಪ್ರಶ್ನೆಗಳೂ ತಳುಕು ಹಾಕಿಕೊಂಡಿವೆ. ಕನಿಷ್ಠ ವೇತನ ಹಾಗೂ ತಮ್ಮ ಹಕ್ಕುಗಳಿಗಾಗಿ ಕಾರ್ಮಿಕರು ಹೋರಾಡುತ್ತಿದ್ದಾರೆ. ಮುಖ್ಯ ಉದ್ಯೋಗ ಸಂಸ್ಥೆಯಾದ ಪಾಲಿಕೆಯು ಬೇಜವಾಬ್ದಾರಿತನದಿಂದ ವರ್ತಿಸುತ್ತಿದೆ. ಯಾವುದೋ ಒಂದು ಬಹುರಾಷ್ಟ್ರೀಯ ಕಂಪನಿಗೆ ನೀಡಿ ಕೈ ತೊಳೆದುಕೊಳ್ಳಲು ತುದಿಗಾಲಲ್ಲಿ ನಿಂತಿದೆ. ಸ್ವಚ್ಛತೆಯಷ್ಟೇ ಪರಮೋದ್ದೇಶವೆನ್ನುವ ಪಾಲಿಕೆಗೆ ಕಾರ್ಮಿಕರ ಒಳಿತನ್ನು ಕುರಿತು ಎಳ್ಳಷ್ಟು ಚಿಂತೆಯಿಲ್ಲ. ಯಾಂತ್ರಿಕೃತಗೊಳಿಸಿದರೆ ಹಲವಾರು ಜನ ಕೆಲಸ ಕಳೆದುಕೊಳ್ಳಲಿದ್ದಾರೆ. ಗುತ್ತಿಗೆ ವ್ಯವಸ್ಥೆ ಸಂಪೂರ್ಣವಾಗಿ ವಿಫಲಗೊಂಡಿದ್ದರೂ ನಿಪುಣ ಗುತ್ತಿಗೆದಾರರಿಗೆ ಗುತ್ತಿಗೆ ನೀಡುವುದು ಪರಿಣಾಮಕಾರಿ ಎಂಬುದು ಆಯುಕ್ತರ ಭಾವನೆ. ದೇಶಿ ಗುತ್ತಿಗೆದಾರರಿಗಿಂತ ವಿದೇಶಿ ಗುತ್ತಿಗೆದಾರರು ಎಷ್ಟು ಪರಿಣಾಮಕಾರಿ ಎಂಬುದು ಅರ್ಥವಾಗದ ವಿಷಯ.

ಈ ಗುತ್ತಿಗೆ ಪೌರ ಕಾರ್ಮಿಕರು ಬೆಂಗಳೂರೆಂಬ ಆಧುನಿಕ ನಗರದಲ್ಲಿ ಅಸ್ಪೃಶ್ಯರಂತೆ ಬದುಕುತ್ತಿದ್ದಾರೆ. ನಾಗರೀಕರ ವಾಸಸ್ಥಳದ ಬೀದಿ ಗುಡಿಸುತ್ತಾರೆ, ಸತ್ತು ನಾರುತ್ತಿರುವ ನಾಯಿ, ಬೆಕ್ಕುಗಳನ್ನು ಬರಿಗೈಯಲ್ಲಿ ಎಳೆದುಹಾಕುತ್ತಾರೆ, ಕೊಳಚೆ ಮೋರಿಗಳನ್ನು ಸ್ವಚ್ಛಗೊಳಿಸುತ್ತಾರೆ. ಅದೇ ನಾಗರೀಕರು ಅವರಿಗೆ ಕುಡಿಯಲು ನೀರನ್ನು ಕಕ್ಕಸ್ಸು ಚೊಂಬಿನಲ್ಲಿ ಬೊಗಸೆಗೆ ಹಾಕುತ್ತಾರೆ. ಇದು ಮಾನವಂತರೆಲ್ಲರೂ ತಲೆ ತಗ್ಗಿಸಬೇಕಾದ ವಿಷಯ.

ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರದು ಬವಣೆಯ ಬದುಕು. ಇವರ ದಿನ ಪ್ರಾರಂಭವಾಗುವುದೇ ಬೆಳಗ್ಗೆ 4-30ಕ್ಕೆ. ಮನೆಯಲ್ಲೂ ದುಡಿದು, ಹೊರಗೂ ಬೆನ್ನು ಬಗ್ಗಿಸಿ ದುಡಿಯುವ ಈ ಮಹಿಳೆಯರು, ಮಾಲೀಕರು, ಮನೆಯ ಗಂಡಸರ ಹಿಂಸೆಯನ್ನು ಸಹಿಸಿಕೊಳ್ಳಬೇಕು. ಮಾಲೀಕರಿಂದ ಬೈಗುಳ ತಿನ್ನುವುದು, ಗಂಡನ ಹೊಡೆತ ತಿನ್ನುವುದು ಮಾಮೂಲಿ ವಿಷಯ. ಮನೆಯೊಳಗಿನ ದುಡಿತ, ಮಕ್ಕಳ ಪಾಲನೆ, ಹೊರಗಿನ ದುಡಿತ ಜೊತೆಗೆ ಹೆಂಗಸೆಂಬ ಕಾರಣಕ್ಕೆ ಅನುಭವಿಸುವ ಹಿಂಸೆ, ಇವೆಲ್ಲದರಿಂದ ಜರ್ಜರಿತವಾದ ಈ ಮಹಿಳೆಯರ ಬದುಕು ಅತ್ಯಂತ ದಾರುಣ, ಗಂಡಸರಷ್ಟೇ ದುಡಿದರೂ ವೇತನದಲ್ಲೂ ತಾರತಮ್ಯ.

ಲಿಂಗ, ಜಾತಿ, ವರ್ಗ ಮೂರು ತಳುಕು ಹಾಕಿಕೊಂಡಿರುವ ಪೌರ ಕಾರ್ಮಿಕರ ಹೋರಾಟ ಅತ್ಯಂತ ಸಂಕೀರ್ಣವಾದುದು ಹೌದು ಹಾಗೆಯೇ ಸಾಮಾಜಿಕ ನ್ಯಾಯ, ಸಮಾನತೆಯನ್ನು ನಂಬಿದವರಿಗೆ ಸವಾಲು ಹೌದು. ಎಲ್ಲರೂ ಕೈ ಜೋಡಿಸಿ ಅವರ ಹೋರಾಟವನ್ನು ಬಲಪಡಿಸಬೇಕಾಗಿದೆ. ದಲಿತೋದ್ಧಾರದ ಬಗ್ಗೆ ಮಾತನಾಡುವ ಸರ್ಕಾರ, ತನ್ನದೇ ಒಂದು ಮುಖ್ಯ ಸಂಸ್ಥೆಯೇ ಅತ್ಯಂತ ಬೇಜಾವಾಬ್ದಾರಿತನದಿಂದ ವರ್ತಿಸುತ್ತಿದೆಯಲ್ಲದೇ, ಖಾಸಗೀಕರಣಕ್ಕೆ ತುದಿಗಾಲಲ್ಲಿ ನಿಂತಿರುವುದು ಅದರ ದಲಿತೋದ್ಧಾರದ ಆಸಕ್ತಿಯನ್ನು ಸ್ಪಷ್ಟ ಪಡಿಸುತ್ತದೆ. ಸಾಮಾಜಿಕ ಭದ್ರತೆಯನ್ನು ಗಾಳಿಗೆ ತೂರುವ ಆರ್ಥಿಕ ಉದಾರೀಕರಣವು ಎಂತಹ ಪರಿಣಾಮ ಬೀರುತ್ತದೆನ್ನುವುದಕ್ಕೆ ಗುತ್ತಿಗೆ ಪೌರಕಾರ್ಮಿಕರ ವಿಷಯವೇ ಸಾಕ್ಷಿ.

- ಸಂಪಾದಕ ಮಂಡಳಿ

ಬಡವರ ಬೆವರಿನಲ್ಲಿ ಸ್ವಚ್ಛವಾಗುವ ಬೆಂಗಳೂರು

ಗುತ್ತಿಗೆ ಪೌರಕಾರ್ಮಿಕರ ಬೆಂಬಲ ಗುಂಪಿನ ಸತ್ಯಶೋಧನಾ ವರದಿ

ಹಿನ್ನೆಲೆ



ಬೆಂಗಳೂರು ನಗರವನ್ನು ಸ್ವಚ್ಛವಾಗಿ ಹಾಗೂ ಸುಂದರವಾಗಿ ಇಡುವ ಜವಾಬ್ದಾರಿ ಬೆಂಗಳೂರು ಮಹಾನಗರಪಾಲಿಕೆಯದ್ದು. ಈ ನಿಟ್ಟಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಬಹುಪಾಲು ಗೆಲುವನ್ನು ಸಾಧಿಸಿದೆ ಎಂಬುದರಲ್ಲಿ ಯಾವ ಅನುಮಾನವಿಲ್ಲ. 'ಉದ್ಯಾನವನಗಳ ನಗರ' ಎಂಬ ಬಿರುದಿಗೆ ಈ ನಗರ ತಕ್ಕದ್ದಾಗಿದೆ.

ಈ ನಗರವನ್ನು ಸ್ವಚ್ಛವಾಗಿಡುವ ಕೆಲಸ ನಿಜವಾಗಿಯೂ ಕಠಿಣವಾದ್ದು. ಇಡೀ ಬೆಂಗಳೂರನ್ನು ಸುಂದರವಾಗಿ ಇಡಲು ನಗರವನ್ನು 140ಕ್ಕಿಂತ ಹೆಚ್ಚು ವಾರ್ಡುಗಳಿದ್ದು ಅವನ್ನು 86 ಪ್ಯಾಕೇಜುಗಳನ್ನಾಗಿ ವಿಭಾಗಿಸಲಾಗಿದೆ, ಹಾಗೂ ಪ್ರತಿ ಪ್ಯಾಕೇಜಿನಲ್ಲಿ 50 ರಿಂದ 100 ಜನ ಪೌರಕಾರ್ಮಿಕರು ದುಡಿಯುತ್ತಿದ್ದಾರೆ. ಹೆಚ್ಚಾಗಿ ಈ ಕಾರ್ಮಿಕರು ದಲಿತ ಸಮುದಾಯದಿಂದ ಬಂದವರು. ಇದರಲ್ಲಿ ಶೇಕಡ 80ಕ್ಕಿಂತ ಹೆಚ್ಚು ಕಾರ್ಮಿಕರು ಹೆಂಗಸರು. ಇವರಲ್ಲಿ ಹೆಚ್ಚು ಜನ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಿಂದ, ಅಕ್ಕ ಪಕ್ಕದ ರಾಜ್ಯಗಳಿಂದ ಕೆಲಸಕ್ಕಾಗಿ ವಲಸೆ ಬಂದವರು. ಈ ನಗರದ ಸ್ವಚ್ಛತೆ ಹಾಗೂ ಸೌಂದರ್ಯಕ್ಕೆ ಇವರೇ ಬೆನ್ನೆಲುಬು.

ಬೆಂಗಳೂರು ಮಹಾನಗರ ಪಾಲಿಕೆಯು 90ರ ಪ್ರಾರಂಭದಲ್ಲಿ ನಗರವನ್ನು ಸ್ವಚ್ಛವಾಗಿಡುವ ಜವಾಬ್ದಾರಿಯನ್ನು ಪೂರ್ತಿಯಾಗಿ ತಾನೇ ನಿರ್ವಹಿಸುವುದು ತನ್ನ ಕೈಲಾಗದ ಕೆಲಸವೆಂದು ತೀರ್ಮಾನಿಸಿತು. ನಗರವನ್ನು ಸ್ವಚ್ಛವಾಗಿಡುವ ಕೆಲಸವನ್ನು ಗುತ್ತಿಗೆಗೆ ನೀಡುವುದರ ಮೂಲಕ ಸ್ವಚ್ಛತಾಕಾರ್ಯವನ್ನು ಉತ್ತಮವಾಗಿ ನಡೆಸಬಹುದೆಂದು ತೀರ್ಮಾನಿಸಿತು. ಅಲ್ಲಿನಿಂದ ನಗರವನ್ನು ಸ್ವಚ್ಛಗೊಳಿಸುವ ಕೆಲಸವನ್ನು ಸರದಿಯಾಗಿ ಗುತ್ತಿಗೆಗೆ ನೀಡಲಾಗುತ್ತಿದೆ. ಇಂದು ಸುಮಾರು ವಾರ್ಡುಗಳಲ್ಲಿ ಗುತ್ತಿಗೆ ಮಾಲೀಕರು 6,000ಕ್ಕಿಂತ ಹೆಚ್ಚು ಗುತ್ತಿಗೆ ಪೌರಕಾರ್ಮಿಕರನ್ನು ಸ್ವಚ್ಛತಾ ಕೆಲಸದಲ್ಲಿ ತೊಡಗಿಸಿದ್ದಾರೆ.

ತಮ್ಮ ಹಕ್ಕುಗಳಿಗಾಗಿ ಹೋರಾಡಲು ಗುತ್ತಿಗೆ ಪೌರಕಾರ್ಮಿಕರು "ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆ ಪೌರಕಾರ್ಮಿಕರ ಸಂಘ"ವನ್ನು ಹೊಂದಿದ್ದಾರೆ. ಈ ಸಂಘವು ನೋಂದಾಯಿಸಲ್ಪಟ್ಟಿದ್ದು ಕಾರ್ಮಿಕರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಹಕ್ಕುಗಳಿಗಾಗಿ ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ ನಿರಂತರವಾಗಿ ಹೋರಾಟವನ್ನು ನಡೆಸುತ್ತಾ ಬಂದಿದೆ.

ಗುತ್ತಿಗೆ ಪೌರಕಾರ್ಮಿಕರ ಹೋರಾಟವನ್ನು ಬೆಂಬಲಿಸಲು ಮಾನವ ಹಕ್ಕುಗಳ ಸಂಸ್ಥೆಗಳು, ಸ್ವಾಯತ್ತ ಗುಂಪುಗಳು, ಮಹಿಳಾ ಸಂಘಟನೆಗಳು ಸರ್ಕಾರೇತರ ಸಂಸ್ಥೆಗಳು ಹಾಗೂ ಸಾಮಾಜಿಕ ಕಳಕಳಿ ಉಳ್ಳ ವ್ಯಕ್ತಿಗಳು ಒಟ್ಟಾಗಿ, ಇವರ ಹೋರಾಟಕ್ಕೊಂದು ಬೆಂಬಲ ಗುಂಪೊಂದನ್ನು ಪ್ರಾರಂಭಿಸಿದರು. ಈ ಬೆಂಬಲ ಗುಂಪು ಕಾರ್ಮಿಕರ ಹೋರಾಟದ ವಿವರ, ಅವರ ಬೇಡಿಕೆಗಳ ಹಿಂದಿರುವ ಉದ್ದೇಶ, ಅವರ ದಿನ ನಿತ್ಯದ ಬದುಕು ಹಾಗೂ ಕೆಲಸ ಮಾಡುವ ಸ್ಥಳದ ಪರಿಸ್ಥಿತಿಯನ್ನು ಕುರಿತು ಸರಿಯಾದ ವಿವರಗಳನ್ನು ಸಂಗ್ರಹಿಸಲು ಸತ್ಯ ಶೋಧನಾ ಸಮಿತಿಯನ್ನು ನಿರ್ಮಿಸಿತು. ಈ ವರದಿಯು, ಸಮಿತಿ ಸ್ವತಂತ್ರವಾಗಿ ನಡೆಸಿದ ವಿಚಾರಣೆಯ ಫಲವಾಗಿದೆ. ಈ ಬಡ ಕಾರ್ಮಿಕರ ಪರಿಸ್ಥಿತಿಯನ್ನು ಅರಿಯಲು ಗುತ್ತಿಗೆ ಕಾರ್ಮಿಕರ ಬೆಂಬಲ ಗುಂಪಿನವರು ದಿನಾಂಕ 11-1-02 ರಿಂದ 14-1-2002ರ ವರೆಗೂ ಬೇರೆ ಬೇರೆ ವಾರ್ಡ್‌ಗಳಿಗೆ ಹೋಗಿ ನಡೆಸಿದ ಪ್ರಾಸಂಗಿಕ ಅಧ್ಯಯನದ ವಿವರವನ್ನು ಇಲ್ಲಿ ದಾಖಲಿಸಿದ್ದೇವೆ.

ಬಾಣಸವಾಡಿ, ಕತ್ರಿಗುಪ್ಪೆ, ಗುರಪ್ಪನ ಪಾಳ್ಯ, ಕಮ್ಮನಹಳ್ಳಿ, ಕೆ. ಆರ್. ಮಾರ್ಕೆಟ್, ನಂದಿನಿ ಲೇಔಟ್, ನಾಗಪುರದಲ್ಲಿರುವ 22 ವಾರ್ಡ್‌ಗಳಿಗೆ ಹೋಗಿ ಭೇಟಿ ಇತ್ತು, 200ಕ್ಕಿಂತಲೂ ಹೆಚ್ಚಿನ ಕೆಲಸಗಾರರನ್ನು ಮಾತನಾಡಿಸಲಾಯಿತು. ಮಹಿಳೆಯರು ಮತ್ತು ಪುರುಷರು ಸೇರಿದಂತೆ 10 ರಿಂದ 20 ಜನರ ಗುಂಪುಗಳಾಗಿ ಮಾಡಿ ಮಾತನಾಡಿಸಲಾಯಿತು. ವೇತನ, ವೇತನ ಪಾವತಿಯಾದ ವಿಧಾನ, ಕೆಲಸ ಮಾಡುವ ಸ್ಥಳದ ಪರಿಸ್ಥಿತಿ, ಅಲ್ಲಿರುವ ಸೌಲಭ್ಯಗಳು, ಅಲ್ಲಿ ನಡೆಯುವ ಕಿರುಕುಳ, ಕೆಲಸದ ನೀತಿನಿಯಮಗಳು, ಕೆಲಸಗಾರರ ವಾಸಸ್ಥಳದ ಪರಿಸ್ಥಿತಿಯನ್ನು ಕುರಿತಂತೆ ಕೇಳಲಾಯಿತು. ಅಲ್ಲಿ ಸಾಮಾನ್ಯವಾಗಿ ಕಂಡುಬಂದ ಪರಿಸ್ಥಿತಿಯನ್ನು ದಾಖಲಿಸಲಾಗಿದೆ.

ಗುತ್ತಿಗೆ-ಪೌರಕಾರ್ಮಿಕರ ಹೋರಾಟ

ಗುತ್ತಿಗೆ ಪೌರಕಾರ್ಮಿಕರ ಸಂಘವು, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿರುವ ಗುತ್ತಿಗೆ ಕಾರ್ಮಿಕರ ಪರವಾಗಿ ಕಳೆದ 6 ವರ್ಷಗಳಿಂದ ಹೋರಾಟವನ್ನು ನಡೆಸುತ್ತಾ ಬಂದಿದೆ. ಹಲವಾರು ರೀತಿಯ ಅಹಿಂಸಾ ಮಾರ್ಗಗಳ ಮೂಲಕ, ತಮ್ಮ ಬೇಡಿಕೆಗಳನ್ನು ಮುಂದಿಡುತ್ತಾ ಬಂದಿದ್ದು, ಗುತ್ತಿಗೆ ಕಾರ್ಮಿಕರ ಕೆಲಸದ ಪರಿಸ್ಥಿತಿಯಲ್ಲಿನ ಅನ್ಯಾಯಗಳನ್ನು ತೆರದಿಟ್ಟು ನ್ಯಾಯಕ್ಕಾಗಿ ಹೋರಾಡುತ್ತಿದೆ.

ಕಳೆದ 6 ತಿಂಗಳಲ್ಲಿ ಈ ಹೋರಾಟವು ತೀವ್ರತೆಯನ್ನು ಪಡೆದುಕೊಂಡಿದೆ. ನಗರದ ಹಲವಾರು ವಾರ್ಡುಗಳಲ್ಲಿರುವ ಕಾರ್ಮಿಕರನ್ನು ಒಟ್ಟಿಗೆ ತರುವ ಕಾರ್ಯದಲ್ಲಿ ಪೂರ್ತಿಯಾಗಿ ಸಂಘವು ತೊಡಗಿಸಿಕೊಂಡಿದೆ. ಸಂಘವು ತನ್ನ ಹೋರಾಟದಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರ ಕಚೇರಿಯನ್ನು ಗುರಿಯಾಗಿಸಿಕೊಂಡಿದೆ. ಕಾರಣ ಗುತ್ತಿಗೆ ಪೌರಕಾರ್ಮಿಕರನ್ನು ಕೆಲಸಕ್ಕಿಟ್ಟುಕೊಂಡಿರುವ ಪ್ರಾಥಮಿಕ ಮಾಲೀಕರು ಪಾಲಿಕೆಯ ಆಯುಕ್ತರು. ಬೆಂಗಳೂರು ಮಹಾನಗರ ಪಾಲಿಕೆಯ ಕಛೇರಿಯ ಎದುರು ಸಾವಿರಾರು ಕಾರ್ಮಿಕರೊಂದಿಗೆ ಬೃಹತ್ ಧರಣಿಯನ್ನು ನಡೆಸಿ, ಕಾರ್ಮಿಕ ಆಯುಕ್ತರು ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೆ ಸಂಘದ ಪ್ರತಿನಿಧಿಗಳು ಹಲವಾರು ಮನವಿ ಪತ್ರಗಳನ್ನು ನೀಡಿದ್ದಾರೆ.

ಗುತ್ತಿಗೆ ಕಾರ್ಮಿಕರ ಕೆಲಸವನ್ನು ಕಾನೂನು ವಿಧಿನಿಯಮಗಳಿಗೆ ಒಳಪಡಿಸುವುದು ಹೋರಾಟದ ಮುಖ್ಯಗುರಿಯಾಗಿದೆ. ಈ ಕೆಲಸಕ್ಕೆ ನೀಡಬೇಕಾದ ನಿಗದಿತ ಕನಿಷ್ಠ ವೇತನವನ್ನು ನೀಡಬೇಕೆಂದು ಕಾರ್ಮಿಕರು ಕೇಳಿದ್ದಾರೆ. ಈಗ ನೀಡುತ್ತಿರುವ ವೇತನ ನಿಗದಿತ ಕನಿಷ್ಠ ವೇತನಕ್ಕಿಂತ ಬಹಳ ಕಡಿಮೆ ಎಂದು ಕಾರ್ಮಿಕರ ಸಂಘ ತಿಳಿಸಿತು. ಮಹಿಳೆಯರಿಗೆ ಪ್ರತಿ ತಿಂಗಳಿಗೆ ರೂ. 800-900 ನೀಡಲಾಗುತ್ತಿದ್ದು, ಪುರುಷರಿಗೆ ರೂ. 1000-1100 ವೇತನ ನೀಡಲಾಗುತ್ತಿದೆ. ಪ್ರತಿಯೊಬ್ಬ ಕಾರ್ಮಿಕರಿಗೆ ದಿನಕ್ಕೆ ರೂ. 71.80 ಅಥವಾ ಪ್ರತಿ ತಿಂಗಳು ರೂ. 2146 ಕನಿಷ್ಠ ವೇತನ ಸಿಗಬೇಕಾಗಿದೆ ಎಂದು ಕಾರ್ಮಿಕ ಸಂಘವು ತಿಳಿಸಿತು. ವಿವರಗಳನ್ನು ಸ್ಪಷ್ಟ ಪಡಿಸುತ್ತಾ ಕಾರ್ಮಿಕರ ಸಂಘವು ಕಾರ್ಮಿಕರ ಇಲಾಖೆ 31-10-2001ರಂದು ನೀಡಿದ ಆದೇಶದ ಪ್ರಕಾರ ದಿನಾಂಕ 27-11-1993ರಂದು ಗೆಜೆಟ್ ನಂ. 3KK 25LMW 88, ರಸ್ತೆ ಕೆಲಸ ಹಾಗೂ ಕಟ್ಟಡ ಕೆಲಸದಲ್ಲಿರುವ ಸ್ವೀಪರ್‌ಗಳಿಗೆ ನಿಗದಿತ ಕನಿಷ್ಠ ಕೂಲಿ ರೂ. 71.80 ಎಂದು ನಮೂದಿಸಿದ್ದು, ಅದೇ ವೇತನವನ್ನು ನಮಗೂ ನೀಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಇದಲ್ಲದೆ ಕಾರ್ಮಿಕರ ಸಂಘ, ಕಾರ್ಮಿಕರಿಗೆಲ್ಲರಿಗೂ ಗುರುತಿನ ಚೀಟಿ ಹಾಗೂ ವೇತನ ಚೀಟಿ ನೀಡುವುದರ ಮೂಲಕ ಅವರನ್ನು ಕಾರ್ಮಿಕರೆಂದು ಗುರುತಿಸಿ ಕೆಲಸದ ಭದ್ರತೆ ನೀಡಬೇಕೆಂದು ಕೋರಿದ್ದಾರೆ. ಅಲ್ಲದೇ ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು, ಕಾರ್ಮಿಕರ ಮೇಲೆ ಅನ್ಯಾಯ, ಅವಮಾನವಾಗದಂತೆ ನೋಡಿಕೊಳ್ಳಬೇಕು ಮತ್ತು ಟೆಂಡರ್ ನಿಯಮಗಳಲ್ಲಿ ನಮೂದಿಸಿರುವ ಎಲ್ಲಾ ನಿಯಮಗಳನ್ನು ಗುತ್ತಿಗೆ ಮಾಲೀಕರು ಜಾರಿಗೆ ತರುವಂತೆ ನೋಡಿಕೊಳ್ಳಬೇಕೆಂದು ಕೇಳಿದ್ದಾರೆ. ತನ್ನ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ಸಂಘವು ಕಾರ್ಮಿಕರ ಇಲಾಖೆಯ ಜೊತೆ ಸಂಧಾನ ಸಭೆಗಳ ಪ್ರಕ್ರಿಯೆಯಲ್ಲಿ ತೊಡಗಿದೆ. ಈ ಪ್ರಕ್ರಿಯೆಯ ಭಾಗವಾಗಿ ಮೊದಲ ಬಾರಿಗೆ ಕಾರ್ಮಿಕರ ವಿವರಗಳನ್ನು ದಾಖಲಿಸಿ ಇಲಾಖೆಗೆ ನೀಡಿದೆ.

ಸಂಘದ ಹೋರಾಟ ಮತ್ತು ನಿರಂತರ ಮಾತುಕತೆಯ ಫಲವಾಗಿ ಪಾಲಿಕೆಯ ಆಯುಕ್ತರು, ಧರಣಿ ಕೂತ ಕಾರ್ಮಿಕರೆದುರಿನಲ್ಲಿ, ಸಾರ್ವಜನಿಕವಾಗಿ ಕನಿಷ್ಠ ವೇತನ ಕೊಡಿಸುವುದಾಗಿ ಹೇಳಿದ್ದಾರೆ. ಕನಿಷ್ಠ ವೇತನ ಜಾರಿಗೊಳಿಸಲು ದಿನಾಂಕ 13-8-2001ರಂದು ಆದೇಶವನ್ನು ಹೊರಡಿಸಿದ್ದಾರೆ.

ನವೆಂಬರ್ ಹಾಗೂ ಡಿಸೆಂಬರ್ ತಿಂಗಳಲ್ಲಿ ಕಾರ್ಮಿಕರು ಹಳೇ ವೇತನವನ್ನು ತೆಗೆದುಕೊಳ್ಳಲು ನಿರಾಕರಿಸಿದಾಗ ಹೋರಾಟ ಒಂದು ಸಂದಿಗ್ಧತೆಗೆ ಸಿಲುಕಿತು. ನವೆಂಬರ್ ತಿಂಗಳಿನಲ್ಲಿ ಹೊಸ ಗುತ್ತಿಗೆ ಪ್ರಾರಂಭವಾದಾಗ ಆಯುಕ್ತರ ಆದೇಶದಂತೆ ತಮಗೆ ಕನಿಷ್ಠ ವೇತನ ಜಾರಿಗೆ ಬರಬಹುದೆಂಬ ನಿರೀಕ್ಷೆಯನ್ನು ಕಾರ್ಮಿಕರು ಹೊಂದಿದ್ದರು. ಗುತ್ತಿಗೆ ಮಾಲೀಕರು ಸಂಬಳದಲ್ಲಿ 100 ರೂ.

ಹೆಚ್ಚಿಸುತ್ತೇವೆ, ತೆಗೆದುಕೊಳ್ಳದಿದ್ದಲ್ಲಿ ಗುತ್ತಿಗೆಯನ್ನು ಕೈಬಿಡುತ್ತೇವೆ ಎಂದು ಬೆದರಿಸಿದರು. 20 ವಾರ್ಡುಗಳಲ್ಲಿನ ಸುಮಾರು 1000 ಕಾರ್ಮಿಕರು ಇಂದಿನವರೆಗೂ ಸಂಬಳ ತೆಗೆದುಕೊಳ್ಳದೇ ಹೋರಾಟಕ್ಕೆ ಬದ್ಧರಾಗಿದ್ದಾರೆ.

ಪಾಲಿಕೆಯ ಆಯುಕ್ತರು, ಕಾರ್ಮಿಕರ ಬದ್ಧತೆಗೆ ಮಣಿದು ಮತ್ತೆ ದಿನಾಂಕ 14-12-2001ರಂದು ಕನಿಷ್ಠ ವೇತನ ನೀಡಲೇಬೇಕೆಂದು ಆದೇಶ ಹೊರಡಿಸಿದರು. ಇದಲ್ಲದೆ ಕನಿಷ್ಠ ವೇತನವನ್ನು ಚೆಕ್/ನಗದು ಮೂಲಕ ನೀಡಲೇಬೇಕು, ನಿಗದಿತ ಸ್ಥಳ ಹಾಗೂ ಸಮಯದಲ್ಲಿ ಪಾಲಿಕೆಯ ಹಿರಿಯ, ಕಿರಿಯ ಆರೋಗ್ಯಾಧಿಕಾರಿಗಳ ಸಮ್ಮುಖದಲ್ಲಿ ನೀಡಬೇಕು. ಗುತ್ತಿಗೆ ಮಾಲೀಕರು ಕಾರ್ಮಿಕರೊಂದಿಗೆ ಸರಿಯಾಗಿ ವರ್ತಿಸಬೇಕು, ನವೆಂಬರ್ ತಿಂಗಳ ಸಂಬಳವನ್ನು ಡಿಸೆಂಬರ್ 19ರ ಒಳಗೆ ನೀಡಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಇಷ್ಟಾದರೂ ಸಹ ಇನ್ನು ಯಾವ ಬದಲಾವಣೆಗಳಾಗಿಲ್ಲ.

ಜನವರಿ 17ರಂದು ಕಾರ್ಮಿಕ ಆಯುಕ್ತರು ಕರೆದಿದ್ದ ನಿರ್ಣಾಯಕ ಸಭೆಯಲ್ಲಿ, ಪಾಲಿಕೆಯ ಆಯುಕ್ತರು ಹಾಗೂ ಕಾರ್ಮಿಕ ಸಂಘದ ಪ್ರತಿನಿಧಿಗಳ ಸಮಕ್ಷಮದಲ್ಲಿ, ಕನಿಷ್ಠ ಕೂಲಿ ನೀಡಬೇಕಾದ ಕೆಲಸಗಳ ಪಟ್ಟಿಯಲ್ಲಿ ಪಾಲಿಕೆಯ ಗುತ್ತಿಗೆ ಕಾರ್ಮಿಕರ ಕೆಲಸ ನಮೂದಿಸಲ್ಪಟ್ಟಿಲ್ಲ, ಪಟ್ಟಿಯಲ್ಲಿದ್ದರೆ ಮಾತ್ರ ಕನಿಷ್ಠ ಕೂಲಿ ನಿರ್ಧರಿಸಿ ನಂತರ ಸರ್ಕಾರಿ ಪ್ರಕಟಣಾ ಪತ್ರಿಕೆಯಲ್ಲಿ ಘೋಷಿಸಲಾಗುವುದು, ಆ ನಂತರವೇ ಪಾಲಿಕೆಯ ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ನೀಡಲಾಗುವುದೆಂದು ತಿಳಿಸಲಾಯಿತು. ಕನಿಷ್ಠ ಕೂಲಿ ನಿರ್ಧರಿಸುವ ಕೆಲಸ ಮೊದಲಿನಿಂದ ಪ್ರಾರಂಭವಾಗಬೇಕಾಗಿದೆ. ಅಲ್ಲಿಯವರೆಗೂ ಕಾರ್ಮಿಕರಿಗೆ ಒಪ್ಪಿಗೆಯಾಗುವ ಒಂದು ವೇತನವನ್ನು ನಿಗದಿಪಡಿಸಿ ಜಾರಿಗೊಳಿಸಲಾಗುವುದು ಮತ್ತು ಕನಿಷ್ಠ ಕೂಲಿ ಕೆಲಸಗಳ ಪಟ್ಟಿಯಲ್ಲಿ ಸೇರಿಸಿ, ಕನಿಷ್ಠ ವೇತನವನ್ನು ನಿರ್ಧರಿಸುವ ಪ್ರಕ್ರಿಯೆಯನ್ನು ತಕ್ಷಣವೇ ಪ್ರಾರಂಭಿಸಲಾಗುವುದೆಂದು ತಿಳಿಸಿದ್ದಾರೆ.

ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆ ಪೌರಕಾರ್ಮಿಕರು ಮತ್ತವರ ಕೆಲಸದ ಪರಿಸ್ಥಿತಿ

ಬೆಳಕಿನ ಹಬ್ಬದಂದು ಎಲ್ಲರೂ ಸಂತೋಷ, ಹುಮ್ಮಸ್ಸು ಉತ್ಸಾಹದಿಂದ ಪಟಾಕಿ ಹೊಡೆದರು. ಕೆಲವು ಸಿಡಿದು ಶಬ್ದ ಮಾಡಿದವು. ಕೆಲವು ಠುಸ್ಸೆಂದವು. ರಸ್ತೆ ತುಂಬಾ ಕಾಗದದ ರಾಶಿ, ಮರುದಿನ ಗುತ್ತಿಗೆ ಪೌರಕಾರ್ಮಿಕಳೊಬ್ಬಳು ಕಸದ ರಾಶಿಯನ್ನೆಲ್ಲ ಗುಡಿಸಿ ಗುಡ್ಡೆ ಮಾಡಿದಳು, ಕಸದ ಗುಡ್ಡೆಯನ್ನು ಕೈಯಲ್ಲಿ ಬಾಚುವಾಗ ಠುಸ್ಸೆಂದಿದ್ದ ಪಟಾಕಿ ಕೈಯಲ್ಲಿ ಸಿಡಿದು ಅಂಗೈನ ಚರ್ಮದ ಮಡಿಕೆಗಳು ಸಿಡಿದು ಹೋದವು. ಗಾಯ ಮಾದು ಹೊಸ ಚರ್ಮ ಬರುವುದಕ್ಕೂ ಕಾಯದೆ ಪೊರಕೆ ಹಿಡಿದು ಗುಡಿಸಲೇ ಬೇಕು ಆಕೆ, ಹೊಟ್ಟೆ ಪಾಡಿಗೆ.

ಹೊಸ ಮಗುವಿಗೆ ಬೆಚ್ಚನೆಯ ಸ್ವೆಟರ್, ಕುಲಾವಿ, ಬೆಚ್ಚಿಗಿನ ತೊಟ್ಟಿಲು, ಅವುಚಿ ತೂಗುವ ಕೈಗಳು, ಆದರೆ ಗುತ್ತಿಗೆ ಪೌರಕಾರ್ಮಿಕಳ ಮೂರು ತಿಂಗಳಿನ ಮಗುವಿಗೆ ರಸ್ತೆ ಬದಿಯೇ ತೊಟ್ಟಿಲು, ಧೂಳು ಕಸವೇ ಸ್ವೆಟರು ಕುಲಾವಿ.

ಇದು ಯಾವುದೋ ಕಟ್ಟು ಕಥೆಯಲ್ಲ. ಸಿಂಗಪುರವಾಗುತ್ತಿರುವ ಬೆಂಗಳೂರನ್ನು ಸ್ವಚ್ಛಗೊಳಿಸುವ ಹೊಣೆ ಹೊತ್ತ ಬಡ ಅರೆ ಹೊಟ್ಟೆಯ ಗುತ್ತಿಗೆ ಪೌರಕಾರ್ಮಿಕರ ಸತ್ಯ ಕಥೆ.

ವೇತನ, ವೇತನ ಪಾವತಿ ವಿಧಾನ

ಪಾವತಿಯಾಗುತ್ತಿರುವ ವೇತನ ತಿಂಗಳಿಗೆ ರೂ. 800 ರಿಂದ ರೂ. 1100ರ ವರೆಗೆ. ಮಹಿಳೆಯರಿಗೆ ರೂ. 800, ಪುರುಷರಿಗೆ ರೂ. 900 ಅಥವಾ ಮಹಿಳೆಯರಿಗೆ ರೂ. 1000 ಮತ್ತು ಪುರುಷರಿಗೆ 1100 ರೂ. ಕೊಡುತ್ತಾರೆ. ವೇತನವನ್ನು ನಗದು ರೂಪದಲ್ಲೇ ಪಾವತಿಸಲಾಗುತ್ತಿದೆ. ವೇತನ ಪಾವತಿಗೆ ನಿರ್ದಿಷ್ಟವಾದ ದಿನಾಂಕ, ಸಮಯ, ಸ್ಥಳವಾಗಲಿ ಇಲ್ಲ. ಗುತ್ತಿಗೆದಾರರ ಏಜೆಂಟ್ ಆದ ಮೇಸ್ತ್ರಿಯು ಯಾವುದಾದರು ಒಂದು ದಿನ ವೇತನವನ್ನು ಕಾರ್ಮಿಕರು ಕೆಲಸ ಮಾಡುವ ಸ್ಥಳಗಳಲ್ಲಿ ಒಬ್ಬೊಬ್ಬರಿಗೆ ಅಥವಾ ಗುಂಪಿನಲ್ಲಿ ಪಾವತಿಸುತ್ತಾನೆ. ವೇತನ ಪಾವತಿ ಕುರಿತಂತೆ ಸರಿಯಾದ ದಾಖಲೆಗಳಿಲ್ಲ. ಕೆಲಸಗಾರರ ಹೆಸರಿರುವ, ಪಾವತಿಸಿದ ವೇತನದ ನಮೂದಾಗಲಿ ಇರುವ ಪಟ್ಟಿಯೇ ಇಲ್ಲ. ಯಾವಾಗಲಾದರೂ ಒಮ್ಮೆ ಸಹಿ ಅಥವಾ ಹೆಬ್ಬೆಟ್ಟಿನ ಗುರುತು ತೆಗೆದುಕೊಳ್ಳುತ್ತಾರೆಂದು ಕೆಲವು ವಾರ್ಡುಗಳಲ್ಲಿನ ಕೆಲಸಗಾರರು ಹೇಳಿದರು. ಅದರಲ್ಲಿ ಕಾರ್ಮಿಕರ ಹೆಸರು ಹೊರತು ಬೇರೇನೂ ಇರುವುದಿಲ್ಲವೆಂದು ಸಹ ಹೇಳಿದರು. ಸರಿಯಾದ ವಿವರಗಳ ಪಟ್ಟಿ ಮಾಡುವುದನ್ನು ಯಾವ ವಾರ್ಡಿನಲ್ಲೂ ಮಾಡಿಲ್ಲ.

ರಜೆಯ ಸೌಲಭ್ಯಗಳು ಇಲ್ಲವೇ ಇಲ್ಲ. ಕೆಲವು ವಾರ್ಡ್‌ಗಳಲ್ಲಿ ಮಾಲೀಕರ ಇಚ್ಛೆಗನುಸಾರವಾಗಿ ಕೆಲವು ಹಿಂದೂ ಹಬ್ಬಗಳ ದಿನದಂದು ಕೆಲಸದಿಂದ ಮುಂಚಿತವಾಗಿ (10 ಅಥವಾ 11-30 ಗಂಟೆಯ ನಂತರ) ಕಳಿಸುವ ಸಂದರ್ಭಗಳಿವೆ. ಸೋಮವಾರದಿಂದ ಶನಿವಾರದವರೆಗೆ ಬೆಳಗಿನ ಜಾವ 6-30 ರಿಂದ 1-30ರ ವರೆಗೆ ಭಾನುವಾರದಂದು 6-30 ರಿಂಪ 11ರ ವರೆಗೂ ಕೆಲಸ ಮಾಡುತ್ತಾರೆ,

ಕೆ.ಆರ್. ಮಾರ್ಕೆಟ್ಟಿನಲ್ಲಿ ಎರಡು ಶಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಾರೆ. ಬೆಳಗಿನ ಶಿಫ್ಟ್ 6-30 ರಿಂದ 1-30ರ ವರೆಗೆ, ಮಧ್ಯಾಹ್ನ 2 ಗಂಟೆಯಿಂದ ಸಂಜೆ 6-45ರ ವರೆಗೆ ಎರಡನೆ ಶಿಫ್ಟ್. ಅಂದರೆ ವಾರಕ್ಕೆ 46 1/2 ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ತಿಂಗಳಿಗೆ ಮಹಿಳೆಯರಿಗೆ ನೀಡುವ ರೂ. 800/-ರ ಲೆಕ್ಕದಲ್ಲಿ ದಿನಕ್ಕೆ ಅವರು ಪಡೆಯುವ ವೇತನ ರೂ. 27/- ಮಹಿಳೆ ಮತ್ತು ಪುರುಷರ ನಡುವೆ ಸಮಾನ ವೇತನವಿಲ್ಲದಿರುವುದರ ಬಗ್ಗೆ ಕೇಳಿದಾಗ ಮಹಿಳೆಯರು ಹೇಳಿದ್ದು "ನಾವು ಅವರಷ್ಟೆ ಕಷ್ಟ ಪಟ್ಟು ಕೆಲಸ ಮಾಡುತ್ತೇವೆ. ನಮಗೂ ಸಮಾನ ವೇತನ ಬೇಕು" ಎಂದು ಹೇಳಿದರು. ಲಾರಿಗೆ ಕಸ ತುಂಬುವುದು, ದೊಡ್ಡ ಕಲ್ಲುಗಳನ್ನು ಎತ್ತಿಹಾಕುವುದು, ದೊಡ್ಡ ಮೋರಿಗಳಲ್ಲಿ ಇಳಿದು ಕಸ, ಕಳೆ ತೆಗೆದು ನೀರು ಹರಿಯುವಂತೆ ಮಾಡುವ ಹೆಚ್ಚಿನ ಶ್ರಮದ ಕೆಲಸಗಳನ್ನು ಪುರುಷರು ಮಾಡುತ್ತಾರೆ. ಕೆಲ ಮಹಿಳೆಯರು ನಾವೂ ಈ ಕೆಲಸವನ್ನು ಮಾಡಬಲ್ಲೆವೆಂದರು.

ದಿನಕ್ಕೆ ಮೂರುಬಾರಿ 6-30ಕ್ಕೆ 10-30ಕ್ಕೆ ಮತ್ತು 1-30ಕ್ಕೆ ಹಾಜರಿ ಹಾಕಲಾಗುತ್ತದೆ. ಎಲ್ಲೇ ಕೆಲಸ ಮಾಡುತ್ತಿರಲಿ ಹಾಜರಿ ಹಾಕುವ ಸ್ಥಳಕ್ಕೆ ಕೆಲಸಗಾರರು ಬರಬೇಕು. ಐದು ನಿಮಿಷ ಲೇಟಾದರೂ ಮನೆಗೆ ಕಳಿಸುತ್ತಾರೆ. ಕೆಲಸಕ್ಕೆ ಬರದಿದ್ದರೆ ದಿನಕ್ಕೆ ರೂ. 40/- ಮುರಿದುಕೊಳ್ಳುತ್ತಾರೆ. ಆದರೆ ದಿನಕ್ಕೆ ಸಿಗುವ ಸಂಬಳ ರೂ. 27/- ಮಾತ್ರ. ಯಾರಾದರೂ ಒಬ್ಬರು ಕೆಲಸಕ್ಕೆ ಬರುವುದಿಲ್ಲವೆಂದರೆ ಅವರ ಕೆಲಸವನ್ನು ಉಳಿದವರು ಮಾಡಿ ಮುಗಿಸಬೇಕು. ಅದಕ್ಕೆ ಹೆಚ್ಚಿನ ಸಂಬಳವೇನೂ ಇಲ್ಲ. ಇದರಿಂದ ಮಾಲೀಕರಿಗೆ ನಷ್ಟವಿಲ್ಲ, ಹೆಚ್ಚಿನ ಲಾಭ ಮಾತ್ರ ಅವರ ಜೇಬಿಗೆ ಸೇರುತ್ತದೆ. ಕೆಲಸದಲ್ಲಿ ಕೊರತೆ ಕಂಡರೆ ದಂಡ ಮಾತ್ರ ಗ್ಯಾರಂಟಿ. ದಂಡ ಮೇಸ್ತ್ರಿಯ ಇಚ್ಛೆಗನುಸಾರವಾಗಿ ರೂ. 10/- ರಿಂದ ರೂ. 100/-ರ ವರೆಗೆ ಹಾಕುತ್ತಾರೆ.

ಮಹಿಳೆಯರು ಅವರ ಕುಟುಂಬ ನಿರ್ವಹಣೆಯ ಎಲ್ಲಾ ಖರ್ಚುವೆಚ್ಚವನ್ನು ದಿನಕ್ಕೆ ರೂ. 27/-ರೊಳಗೆ ತೂಗಿಸಿಕೊಳ್ಳಬೇಕು. ಕೆಲವು ಮಹಿಳೆಯರು ದೂರದಿಂದ ಬರಬೇಕಾಗಿರುವುದರಿಂದ ಬಸ್ ಚಾರ್ಜ್‌ಗೂ ಹಣ ತೆರಬೇಕು. ದಿನಕ್ಕೆ ರೂ. 10/-ರಷ್ಟು ಬಸ್ ಚಾರ್ಜ್‌ಗೆಂದು ಖರ್ಚಾಗುತ್ತದೆ. ಕಮ್ಮನಹಳ್ಳಿಯಲ್ಲಿ ಕೆಲಸ ಮಾಡುವ ಮಹಿಳೆಯೊಬ್ಬಳು ಅಶೋಕನಗರದಿಂದ ಬರಲು ದಿನಕ್ಕೆ ರೂ. 14/- ಬಸ್‌ಚಾರ್ಜ್ ನೀಡುತ್ತಾಳೆ. ಕೆಲಸಕ್ಕೆ ಹೊರಡುವ ಮೊದಲು ಯಾರು ಏನನ್ನೂ ತಿಂದು ಬರುವುದಿಲ್ಲ, ನಡುವೆ ಕಾಫಿ, ಟೀಗೆಂದು ಖರ್ಚು ಮಾಡುತ್ತಾರೆ. ತಿಂಗಳ ಕೊನೆಯಲ್ಲಿ ಗೈರುಹಾಜರಿಗೆ, ದಂಡಕ್ಕೆ ಹಣ ಮುರಿದುಕೊಂಡು ಅವರ ಕೈಗೆ ಬರುವುದು ಅತ್ಯಲ್ಪ.

ಕುಟುಂಬ ನಿರ್ವಹಣೆಗೆ ಬೇರೆ ಉಪ ಆದಾಯದ ಬಗ್ಗೆ ಕೇಳಲಾಯಿತು. ಕೆಲವು ವಾರ್ಡ್‌ಗಳಲ್ಲಿ ಮಹಿಳೆಯರು ಊದುಬತ್ತಿ ಹೊಸೆಯುವುದು, ಮನೆಗೆಲಸ ಮಾಡುವುದು, ಹೂವು, ಹಣ್ಣು ಮತ್ತು ತರಕಾರಿಗಳನ್ನು ಮಾರುವುದಾಗಿ ಹೇಳಿದರು. ಬಹಳಷ್ಟು ಮಹಿಳೆಯರು 'ಕೆಲಸ ಮಾಡಿ ಸಾಕಾಗಿರುತ್ತೆ, ಬೇರೆ ಕೆಲಸ ಮಾಡಲು ಶಕ್ತಿನೇ ಇರಲ್ಲ' ಎಂದರು. ಕೆಲವರ ಮನೆಯಲ್ಲಿ ಗಂಡ, ಹೆಂಡತಿ, ಮಕ್ಕಳು ಎಲ್ಲರೂ ಗುಡಿಸುವ ಕೆಲಸ ಮಾಡುತ್ತಾರೆ. ಒಟ್ಟು ಕುಟುಂಬವಾಗಿದ್ದರೆ ಇತರರ ಸಂಪಾದನೆಯೂ ಆದಾಯವಾಗುತ್ತದೆ. ಕೆಲವು ಮಹಿಳೆಯರು ಬರೀ ಸಂಬಳದಲ್ಲಷ್ಟೇ ಮನೆ ನಡೆಸುತ್ತಾರೆ. ಒಬ್ಬ ಮಹಿಳೆಯ ಗಂಡ ಬಿದ್ದು ಕಾಲು ಮುರಿದುಕೊಂಡು ಮೂಲೆ ಸೇರಿರುವುದರಿಂದ ಅವನನ್ನು ಸಾಕುವ ಜವಾಬ್ದಾರಿಯೂ ಆಕೆಯದಾಗಿದೆ. ಇನ್ನೊಬ್ಬ ಮಹಿಳೆಯ ಗಂಡ 4-5 ವರ್ಷಗಳಿಂದ ಟಿ.ಬಿ. ಕಾಯಿಲೆಯಿಂದ ನರಳುತ್ತಿದ್ದು, ದುಡಿಯಲು ಅಸಮರ್ಥನಾಗಿರುವುದರಿಂದ ಮನೆ ನಡೆಸುವ ಪೂರ್ತಿ ಹೊಣೆ ಆಕೆಯದೇ ಆಗಿದೆ. ಮೂಲಭೂತ ಅಗತ್ಯಗಳಿಗೂ ಸಾಲದ ಅತ್ಯಲ್ಪ ವೇತನದಲ್ಲಿ ಹೇಗೆ ಬದುಕುತ್ತಾರೆಂಬುದು ಆಶ್ಚರ್ಯ ಹುಟ್ಟಿಸುತ್ತದೆ. ಕೊಳಚೆಗೇರಿಯಲ್ಲಿನ ರಾಜಕೀಯ, ಜೀವನಾಧಾರಗಳ ಬಗ್ಗೆ ವಿವರವಾಗಿ ಅಭ್ಯಸಿಸುವ ಅಗತ್ಯವಿದೆ.

ನವೆಂಬರ್ ತಿಂಗಳಿನಿಂದ ಕಾರ್ಮಿಕರು ತಮ್ಮ ಹೋರಾಟವನ್ನು ತೀವ್ರಗೊಳಿಸಿದ್ದರಿಂದ ಮತ್ತು ಕೆಲವು ವಾರ್ಡುಗಳಲ್ಲಿ ಕಾರ್ಮಿಕರು ಕನಿಷ್ಠ ವೇತನ ನೀಡುವವರೆಗೂ ಸಂಬಳ ತೆಗೆದುಕೊಳ್ಳುವುದಿಲ್ಲ ವೆಂದು ನಿರ್ಧರಿಸಿದ್ದರ ಪರಿಣಾಮ ಮಾಲೀಕರಿಗೆ ತಟ್ಟಿದೆ. ಹಾಗಾಗಿ ಎಲ್ಲಾ ವಾರ್ಡುಗಳಲ್ಲಿ ತಮ್ಮ ಏಜೆಂಟುಗಳ ಮೂಲಕ ತಿಂಗಳಿಗೆ ರೂ. 100/- ಹೆಚ್ಚಿಸುವುದಾಗಿ ಹೇಳುತ್ತಿರುವುದು ಗಮನಾರ್ಹ.

ಕೆಲಸ ಮಾಡುವ ಸ್ಥಳದ ಪರಿಸ್ಥಿತಿ ಮತ್ತು ಅಲ್ಲಿ ಸಿಗುವ ಸೌಲಭ್ಯಗಳು

6-30ಕ್ಕೆ ಕೆಲಸದ ಸ್ಥಳದಲ್ಲಿರಲು ಎಲ್ಲ ಕೆಲಸಗಾರರು, ಸಾಮಾನ್ಯವಾಗಿ 5-30ಕ್ಕೆ ಮನೆ ಬಿಡುತ್ತಾರೆ, 5ಕ್ಕೂ ಮನೆ ಬಿಡುವವರಿದ್ದಾರೆ. ಅಂದರೆ ಅವರ ದಿನ ಪ್ರಾರಂಭವಾಗುವುದು ಸಾಮಾನ್ಯವಾಗಿ ಬೆಳಗಿನ ಜಾವ 5 ಗಂಟೆಗೆ. ಬಸ್‌ಚಾರ್ಜ್ ಉಳಿಸಲು ಅನೇಕರು ದೂರದಿಂದಲೂ ನಡೆದುಕೊಂಡೇ ಬರುತ್ತಾರೆ. ದಿನಕ್ಕೆ ಸಿಗುವುದು ಕೇವಲ ರೂ. 27/- ಆದ್ದರಿಂದ ಒಂದೊಂದು ಪೈಸೆಯೂ ಅವರಿಗೆ ಮಹತ್ವದ್ದು. ಬೆಳಗಿನ ಜಾವದಲ್ಲಿ

ಕತ್ತಲಿರುವುದರಿಂದ ಒಟ್ಟೊಟ್ಟಿಗೆ ನಡೆದುಕೊಂಡು ಬರುತ್ತಾರೆ. ಹಾದಿಯಲ್ಲಿ ಬೀದಿನಾಯಿಗಳ, ಪೋಲಿಪುಂಡರ ಕಾಟವೂ ಉಂಟು. ಹತ್ತು ವರ್ಷದಿಂದ ಕೆಲಸ ಮಾಡುತ್ತಿರುವ ಮಹಿಳೆಯೊಬ್ಬಳು 8 ಬಾರಿ ನಾಯಿಯಿಂದ ಕಚ್ಚಿಸಿಕೊಂಡಿದ್ದಾಳೆ. ಒಂದಕ್ಕಿಂತ ಹೆಚ್ಚುಬಾರಿ ನಾಯಿಯಿಂದ ಕಚ್ಚಿಸಿಕೊಂಡ ಅನೇಕ ಮಹಿಳೆಯರಿದ್ದಾರೆ. ಬಸ್‌ನಲ್ಲಿ ಬರುವವರು ಇನ್ನೂ ಬೇಗನೆ ಏಳಬೇಕು. ಮನೆಯಿಂದ ಬಸ್ ಸ್ಟಾಪಿಗೆ ಬರಲು ದಿನಕ್ಕೆ ಅರ್ಧ ಗಂಟೆ ನಡೆಯಬೇಕು. ಮನೆಯನ್ನು 5 ಗಂಟೆಗೂ ಮೊದಲೇ ಬಿಡಬೇಕು. ಬಾಣಸವಾಡಿಯಲ್ಲಿ ಕೆಲಸ ಮಾಡುವ ಮಹಿಳೆ ಮನೆಯಿಂದ ಬರುವ ಹಾದಿಯಲ್ಲಿ ಸೈನಿಕರ ನೆಲೆಯ ಮುಂದೆ ಹಾದು ಬರಬೇಕಾಗಿರುವುದರಿಂದ, ಅವರ ಶಿಳ್ಳೆ, ಚೇಷ್ಟೆಗಳನ್ನು ನಿತ್ಯವೂ ಸಹಿಸಿಕೊಳ್ಳಬೇಕು.

ಬೆಳಗಿನ ಜಾವವೇ ಮನೆ ಬಿಡಬೇಕಾಗುವುದರಿಂದ ಯಾವ ಮಹಿಳೆಗೂ ಅಡುಗೆ ಮಾಡುವುದಾಗಲಿ, ಉಂಡು ಬರುವುದಾಗಲಿ ಸಾಧ್ಯವಾಗುವುದಿಲ್ಲ. ಒಂದು ಲೋಟ ಕಾಫಿ ಕುಡಿದು ಬರುವುದು ಸಾಧ್ಯವಾಗುವುದಿಲ್ಲ ಎಂದು ಅನೇಕ ಮಹಿಳೆಯರು ಹೇಳಿದರು. ಒಂದೇ ಹೊತ್ತು ಎಲ್ಲರೂ ಊಟ ಮಾಡುವುದು. ಕೆಲಸ ಮುಗಿಸಿ ಮನೆಗೆ ಹೋಗಿ ಮಾಡುವ ಅಡುಗೆಯೊಂದೇ ಇಡೀ ದಿನಕ್ಕೆ. ಕೆಲಸಮಾಡುವ ಸ್ಥಳದಲ್ಲಿ ಅಲ್ಲಿನ ನಿವಾಸಿಗಳು ಕೆಲವೊಮ್ಮೆ ಮಿಕ್ಕ ತಂಗಳನ್ನು ಪ್ಲಾಸ್ಟಿಕ್ ಚೀಲದಲ್ಲೋ, ಪೇಪರಿನಲ್ಲೋ ಸುತ್ತಿಕೊಡುವುದನ್ನು ತಿನ್ನುತ್ತಾರೆ. ಮೂರು ನಾಲ್ಕು ಬಾರಿ ಟೀ, ಕಾಫಿ ಕುಡಿಯುತ್ತಾರೆ. ಹೋಟೆಲ್‌ಗಳ ಕಸ ಎತ್ತುವುದರಿಂದ ಒಂದೆರಡುಬಾರಿ ಕಾಫಿ, ಟೀ ಕಾಸಿಲ್ಲದೆ ಸಿಗುತ್ತದೆ. ಕೆಲಸದ ಸ್ಥಳದಲ್ಲಿ ಕುಡಿಯಲು, ಕೈಕಾಲು ತೊಳೆಯಲು ನೀರಿನ ವ್ಯವಸ್ಥೆ ಎಲ್ಲೂ ಇಲ್ಲ. ಯಾವ ಮನೆಯವರೂ ಕುಡಿಯಲು ನೀರು ಕೊಡುವುದಿಲ್ಲ, ಕೊಟ್ಟರೂ ಬಚ್ಚಲುಮನೆ, ಕಕ್ಕಸ್ಸುಮನೆ ಚೊಂಬಿನಲ್ಲಿ ತಂದು ಮೇಲಿನಿಂದ ಬೊಗಸೆಗೆ ಸುರಿಯುತ್ತಾರೆಂದು ಹೇಳಿದರು. ಕೆಲವು ಮಹಿಳೆಯರು ನೀರನ್ನು ಕೈಗೆ ಸುರಿಯುತ್ತಾರೆಂದು ನಾವು ನೀರನ್ನೆ ಕೇಳುವುದಿಲ್ಲವೆಂದು ಹೇಳಿದರು. ಎಷ್ಟೇ ಆಗಲಿ ಕೀಳು ಜಾತಿಯವರಲ್ಲವೆ? ಆಧುನಿಕ ಬೆಂಗಳೂರು ಬೇರೆಲ್ಲ ನಗರಗಳಂತೆ ಜಾತಿಯ ವಿಷಯದಲ್ಲಿ ಅಪ್ಪಟ ಸಂಪ್ರದಾಯವಾದಿ. ಎಷ್ಟೊ ಜನ ಮಹಿಳೆಯರು ಮನೆಗಳಲ್ಲಿ ನೀರು ಕೇಳದೆ ಹೋಟೆಲುಗಳಲ್ಲಿ ನೀರು ಕುಡಿಯುತ್ತಾರೆ. ಮಧ್ಯಮ ವರ್ಗದ ನಾಗರೀಕರಿಗಿಂತ ಹೋಟೆಲುಗಳೇ ಹೆಚ್ಚು ಆಧುನಿಕ! ಕೆಲಸಗಾರರ ನಡುವೆ ಜಾತಿ ವಿಷಯ ಕುರಿತಂತೆ ತಾರತಮ್ಯವಿಲ್ಲದಿರುವುದು ಬಹುಮುಖ್ಯ ಆಸಕ್ತಿದಾಯಕ ಅಂಶ. ಕೆಲಸಗಾರರಲ್ಲಿ ಶೇಕಡ 80ಕ್ಕಿಂತ ಹೆಚ್ಚಿನ ಜನರು ದಲಿತರು, ಕುರುಬರು, ಕುಂಬಾರ ಸೆಟ್ಟಿ, ಗೌಡರಂತಹ ಹಿಂದುಳಿದ ವರ್ಗದ ಕೋಮಿನವರೂ ಇದ್ದಾರೆ. ಒಂದು ವಾರ್ಡಿನಲ್ಲಿ ಮುಸ್ಲಿಮ್ ಮಹಿಳೆ ಇದ್ದಾಳೆ. ಒಟ್ಟಿಗಿರುವುದು, ಊಟ ತಿಂಡಿ ಹಂಚಿಕೊಂಡು ತಿನ್ನುವುದು ಇದ್ಯಾವುದಕ್ಕೂ ಜಾತಿ ಅಡ್ಡಿಯಾಗಿಲ್ಲ. ಎಲ್ಲಾ ಜಾತಿಯವರು ಎಲ್ಲಾ ರೀತಿಯ ಕೆಲಸ ಮಾಡುತ್ತಾರೆ.

ಕೆಲಸದ ಸ್ಥಳವೆಂದರೆ ಎಲ್ಲರೂ ಬಯಲಿನಲ್ಲಿ ಒಂದೆಡೆ ಸೇರುವ ಜಾಗ. ತಮ್ಮ ಉಪಕರಣಗಳನ್ನಿಡಲು, ವಿರಮಿಸಲು ಕೊಠಡಿ ಎಂಬುದಿಲ್ಲ. ಕತ್ರಿಗುಪ್ಪೆಯಲ್ಲಿ ಮಾತ್ರ ಖಾಲಿ ಜಾಗದಲ್ಲೊಂದು ಶೆಡ್ ಅನ್ನು ಕೆಲಸಗಾರರೇ ಹಾಕಿ ತಮ್ಮ ಉಪಕರಣಗಳನ್ನಿಟ್ಟುಕೊಳ್ಳಲು ಜಾಗ ಮಾಡಿಕೊಂಡಿದ್ದಾರೆ. ಮಾಲೀಕರಾಗಲಿ ಅವರ ಸಹಾಯಕರಾಗಲಿ ಏನೂ ಸಹಾಯ ಮಾಡಿಲ್ಲ. ಬೇರೆ ವಾರ್ಡುಗಳಲ್ಲಿ, ಅಲ್ಲಿನ ನಿವಾಸಿಗಳು ತಮ್ಮ ಮನೆಯ ಕಾಂಪೌಂಡಿನಲ್ಲಿ ಉಪಕರಣಗಳನ್ನಿಟ್ಟುಕೊಳ್ಳಲು ಕೆಲವೊಮ್ಮೆ ಜಾಗ ನೀಡುತ್ತಾರೆ. ಜಾಗ ಸಿಗದಿದ್ದರೆ ನಿತ್ಯವೂ ಪೊರಕೆ, ಮಂಕ್ರಿಯನ್ನು ಮನೆಗೆ ತೆಗೆದುಕೊಂಡು ಹೋಗಿ ತರಬೇಕು. ಕೆಲಸ ಮಾಡುವ ಸ್ಥಳದಲ್ಲಿ ಶೌಚಾಲಯದ ವ್ಯವಸ್ಥೆಯೇ ಇಲ್ಲ. ನೈಸರ್ಗಿಕ ಕರೆಯನ್ನು ಖಾಲಿ ಸೈಟಿನಲ್ಲೋ, ಗಿಡ ಪೊದೆಗಳ ಹಿಂದೆಯೋ ಪೂರೈಸಿಕೊಳ್ಳಬೇಕು.

ಕೆಲಸಗಾರರಿಗೆ ನೀಡುವ ಉಪಕರಣಗಳೆಂದರೆ ಪೊರಕೆ, ಮಂಕ್ರಿ, ಸನಿಕೆ, ಕುಡುಗೋಲು, ಕಸ ಬಾಚುವ ತಗಡು. ಸನಿಕೆ, ಕುಡುಗೋಲುಗಳನ್ನು ಪುರುಷರೇ ಹೆಚ್ಚು ಬಳಸುವುದು. ಯಾರಿಗೂ ಕೈ ಗ್ಲೌಸುಗಳಾಗಲಿ, ಗಂಬೂಟುಗಳಾಗಲಿ ನೀಡಿಲ್ಲ. ಆದರೆ ಟೆಂಡರ್ ಕರೆದಾಗ ಮಾತ್ರ 32 ಉಪಕರಣಗಳ ಪಟ್ಟಿಯನ್ನು ಮಾಲೀಕರು ತಪ್ಪದೇ ಸಲ್ಲಿಸುತ್ತಾರೆ. ಇವೆಲ್ಲವನ್ನು ನಮೂದಿಸಿದರೆ ಮಾತ್ರ ಪಾಲಿಕೆಯು ಗುತ್ತಿಗೆ ನೀಡುವುದು. ಎಲ್ಲಾ ಉಪಕರಣಗಳು ಕೆಲಸಗಾರರನ್ನು ತಲುಪದೆ ಪಟ್ಟಿಯಲ್ಲೇ ಉಳಿದುಬಿಡುತ್ತವೆ. ಎಷ್ಟೋ ಮಹಿಳೆಯರು ಪೊರಕೆಯನ್ನು ತಾವೇ ದುಡ್ಡು ಕೊಟ್ಟು ತರುತ್ತಾರೆ. ಕಾರಣ ತಿಂಗಳಿಗೆ ಒಂದೇ ಪೊರಕೆಯನ್ನು ಅವರಿಗೆ ಕೊಡುತ್ತಾರೆ. ಪೊರಕೆ ಸವೆದು ತುಂಡಾದರೆ ಹೆಚ್ಚು ಬಗ್ಗಿ ಗುಡಿಸಬೇಕು. ಹಾಗೆ ಹೆಚ್ಚು ಬಗ್ಗುವುದರಿಂದ ಬೆನ್ನು ನೋವು ಬರುತ್ತದೆ. ಅದಕ್ಕೆ ಪೊರಕೆ ತುಂಡಾದಾಗ ನಾವೇ ದುಡ್ಡು ಕೊಟ್ಟು ತಂದುಕೊಳ್ಳುತ್ತೇವೆ ಎಂದು ಅನೇಕ ಮಹಿಳೆಯರು ಹೇಳಿದರು. ಸನಿಕೆಗಳನ್ನು ವರ್ಷಕ್ಕೊಂದು ಬಾರಿ ಬದಲಾಯಿಸುತ್ತಾರೆ.

ಮಂಕ್ರಿಯನ್ನು ಆರು ತಿಂಗಳಿಗೊಮ್ಮೆ ಬದಲಾಯಿಸಿದರೆ ಹೆಚ್ಚು. ಉಪಕರಣಗಳನ್ನೇನಾದರು ಕಳೆದರೆ ದಂಡ ಹಾಕಿ ಸಂಬಳದಲ್ಲಿ ಮುರಿದುಕೊಳ್ಳುತ್ತಾರೆ.

ಇವರದು ಎಂಥ ಕಷ್ಟದ ದುಡಿಮೆ ಎಂದರೆ ಕೆಟ್ಟ ಪರಿಸ್ಥಿತಿಯಲ್ಲಿ, ಅರೆ ಹೊಟ್ಟೆಯಲ್ಲಿ ಮೂಳೆ ಮುರಿಯುವ ಕೆಲಸ ಮಾಡುತ್ತಾರೆ. ನಾಗರೀಕರು ಎಸೆಯುವ ನ್ಯಾಪ್ಕಿನ್‌ಗಳು, ರಕ್ತದ ಬಟ್ಟೆಗಳು, ಮಕ್ಕಳ ಹೇಲಿನ ಬಟ್ಟೆಗಳು, ನೀರು ಕಸ ಒಂದು ಮಾಡಿ ಎಸೆಯುವುದನ್ನು ಈ ಮಹಿಳೆಯರು ಬರಿಗೈಲೇ ಬಾಚುತ್ತಾರೆ. ಸತ್ತು ವಾಸನೆ ಹೊಡೆಯುವ ನಾಯಿ, ಬೆಕ್ಕುಗಳನ್ನು ಕೈಯಲ್ಲಿ ಎಳೆದು ಎತ್ತಿಹಾಕುತ್ತಾರೆ. ಪಾರ್ಥೆನಿಯಂ ಗಿಡಗಳನ್ನು ಬರಿಗೈಲೇ ಕೀಳುವುದರಿಂದ ಕೈಗಳ ಮೇಲೆಲ್ಲಾ ತುರಿಕೆಯಿಂದ ಗಂದೆಗಳಾಗುತ್ತದೆ. ಕೆಲವು ಮಹಿಳೆಯರು ಕೈಗಳನ್ನು ರಕ್ಷಿಸಿಕೊಳ್ಳಲು ಪ್ಲಾಸ್ಟಿಕ್ ಚೀಲಗಳನ್ನು ಕೈಗೆ ಸುತ್ತಿಕೊಂಡು ಕೀಳಲು ಪ್ರಯತ್ನಿಸಿದಾಗ ಕೆಲಸ ತಡವಾಗುವುದೆಂದು ಮೇಸ್ತ್ರಿ ಕೂಗಾಡುವುದನ್ನು ಕುರಿತು ಹೇಳಿದರು. ಬಗ್ಗಿ ಗುಡಿಸುವುದರಿಂದ ಬೆನ್ನು ನೋವಿನಿಂದ ನರಳುವುದು ಸಾಮಾನ್ಯ. ನಿತ್ಯ ಗುಡಿಸುವುದರಿಂದ ಮೊಣಕೈ ಊತ, ನೋವು ಸಾಮಾನ್ಯ. ಕಾಲು ಕೈಗಳಿಗೆ ಮೊಳೆಗಳು, ಗಾಜಿನ ಚೂರುಗಳು ಚುಚ್ಚಿ, ಪೆಟ್ಟು ಬಿದ್ದು ಗಾಯವಾಗುವುದು ಮಾಮೂಲಿ. ಅನೇಕರ ಕೈ ಕಾಲಿನ ಹುಣ್ಣು, ಗಾಯಗಳಿಗೆ ತಕ್ಷಣದ ಚಿಕಿತ್ಸೆಯ ಅಗತ್ಯವಿದ್ದರೂ ಹಾಗೇ ಕೆಲಸ ಮಾಡುತ್ತಾರೆ. ಬಹಳಷ್ಟು ಜನರಿಗೆ ಉಸಿರಾಟ ಸಂಬಂಧಿ ಕಾಯಿಲೆಗಳಿವೆ. ಎಲ್ಲರೂ ಆಸ್ಪತ್ರೆಗೆಂದು ಹೆಚ್ಚು ಕಡಿಮೆ ವರ್ಷಕ್ಕೆ ರೂ. 1000/- ಖರ್ಚು ಮಾಡುತ್ತಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸಮಯ ತೆಗೆದುಕೊಳ್ಳುವುದರಿಂದ, ಕೆಲಸದಲ್ಲಿ ಬಿಡುವು ಮಾಡಿಕೊಳ್ಳಲಾಗದಿರುವುದರಿಂದ ಎಲ್ಲರೂ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆ. ಅವರು ಹೋಗುವ ವೈದ್ಯರು ನೀಡುವ ಚಿಕಿತ್ಸೆ ಎಂತಹದೆಂದು ಊಹಿಸಬಹುದು.

ಅಪಾಯಕಾರಿ ಅಪಘಾತಗಳು ಕೆಲಸ ಮಾಡುವ ಸ್ಥಳಗಳಲ್ಲಿ ನಡೆದಿವೆ. 54ಎ ವಾರ್ಡಿನಲ್ಲಿ ಕೆಲಸ ಮಾಡುತ್ತಿದ್ದ ಮಾರಕ್ಕ ರಸ್ತೆ ಬದಿಯಲ್ಲಿ ಗುಡಿಸುತ್ತಿದ್ದಾಗ ಲಾರಿ ಡಿಕ್ಕಿ ಹೊಡೆದು ಬಿದ್ದಿದ್ದರಿಂದ ಸೊಂಟದ ಮೂಳೆ ಮುರಿದುಕೊಂಡಿದ್ದಾಳೆ. ಕೆಲಸಗಾರರು ತಕ್ಷಣವೇ ಡ್ರೈವರನ್ನು ಹಿಡಿದು ಪೊಲೀಸ್ ಕಂಪ್ಲೈಂಟ್ ನೀಡಿ ಆಕೆಯನ್ನು ಆಸ್ಪತ್ರೆಗೆ ಸೇರಿಸಿದರು. ಒತ್ತಾಯ ಮಾಡಿ ಆಸ್ಪತ್ರೆ ಖರ್ಚು ರೂ. 3,000/-ವನ್ನು ಮಾಲೀಕನೇ ಕೊಡುವಂತೆ ಮಾಡಿದ್ದಾರೆ. ಈಗಲೂ ಆಕೆಗೆ ಸರಿಯಾಗಿ ನಡೆಯಲಾಗುವುದಿಲ್ಲ. ವಾಪಸ್ಸು ಕೆಲಸಕ್ಕೆ ತೆಗೆದುಕೊಳ್ಳುವ ಗ್ಯಾರಂಟಿ ಇಲ್ಲ. ಆಸ್ಪತ್ರೆ ಖರ್ಚು ಬಿಟ್ಟು ಇನ್ಯಾವ ಪರಿಹಾರ ಧನವೂ ಆಕೆಗೆ ಸಿಕ್ಕಿಲ್ಲ. ಮತ್ತೊಬ್ಬ ಮಹಿಳೆಗೆ ಕಸ ತುಂಬುವಾಗ ಲಾರಿಯಿಂದ ಸೈಜ್ ಕಲ್ಲು ಕೈ ಮೇಲೆ ಬಿದ್ದು ಮುರಿದಿದೆ. ನಾಗಪುರ ವಾರ್ಡಿನಲ್ಲಿ ಮುನಿಯಮ್ಮ ದೀಪಾವಳಿಯ ಮಾರನೆ ದಿನ ಕಸ ಗುಡಿಸಿ ಗುಡ್ಡೆ ಮಾಡಿ ಎತ್ತುವಾಗ ಠುಸ್ಸೆಂದಿದ್ದ ಪಟಾಕಿ ಕೈಯಲ್ಲಿ ಸಿಡಿದು ಅಂಗೈ ಚರ್ಮ ಸಿಡಿದುಹೋಗಿದೆ. ಮೈಕೋ ಲೇಔಟ್‌ನಲ್ಲಿ ಅಯ್ಯಮ್ಮ ಕಸ ಗುಡಿಸಿ ಬೆಂಕಿ ಹಚ್ಚುವಾಗ ಬೆಂಕಿ ತಗುಲಿ ಸತ್ತುಹೋಗಿದ್ದಾಳೆ. ಗುತ್ತಿಗೆ ಮಾಲೀಕ ಕೇವಲ ರೂ. 3,000/- ಆಸ್ಪತ್ರೆ ಖರ್ಚನ್ನಷ್ಟೇ ನೀಡಿದ್ದು. ಆಸ್ಪತ್ರೆಗೆ ಆಕೆಯ ಮನೆಯವರು ತುಂಬಾ ದೊಡ್ಡ ಮೊತ್ತವನ್ನು ಖರ್ಚು ಮಾಡಿದರೂ ಆಕೆ ಉಳಿಯಲಿಲ್ಲ. ಆಕೆಯ ಸಂಪಾದನೆಯೇ ಮುಖ್ಯ ಆದಾಯವಾಗಿದ್ದು ಈಗ ಅವರ ಮನೆಯವರೆಲ್ಲ ಸಾಲಗಾರರಾಗಿದ್ದಾರೆಂದು ಆಕೆಯ ಮಗಳು ಮೀನಾಕ್ಷಿ ಹೇಳಿದಳು. ವಾಹನಗಳಿಂದಾಗುವ ಅಪಘಾತಗಳು, ಬೀದಿ ನಾಯಿಗಳಿಂದ ಕಚ್ಚಿಸಿಕೊಳ್ಳುವುದು ಮಾಮೂಲಿ. ಎಲ್ಲೋ ಒಮ್ಮೊಮ್ಮೆ ಆಸ್ಪತ್ರೆ ಖರ್ಚು ಸಿಕ್ಕರೂ ಪರಿಹಾರಧನ ಮಾತ್ರ ಯಾವ ಕೆಲಸಗಾರರಿಗೂ ಸಿಕ್ಕಿಲ್ಲ. ಹುಷಾರಾಗಿ ವಾಪಸ್ಸು ಬಂದರೆ ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವ ಗ್ಯಾರಂಟಿ ಇಲ್ಲ.

ಅಪಾಯಕಾರಿ ವಾತಾವರಣದಲ್ಲಿ ಕೆಲಸ ಮಾಡುವುದರ ಜೊತೆಗೆ ಕಿರುಕುಳವನ್ನು ಅನುಭವಿಸಬೇಕು. ಮೇಸ್ತ್ರಿಗಳ ಕೆಟ್ಟ ಬೈಗುಳ ದಿನನಿತ್ಯದ್ದು. ಲೈಂಗಿಕ ಕಿರುಕುಳವಿಲ್ಲವೆಂದು ಮಹಿಳೆಯರು ಹೇಳಿದರು. ಆದರೆ ಸಂಘದ ಪದಾಧಿಕಾರಿಗಳು, ಮೇಸ್ತ್ರಿಗಳು ಮತ್ತು ಮಾಲೀಕರುಗಳಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗಿರುವ ಘಟನೆಗಳಿವೆ ಎಂದು ಹೇಳಿದರು. ಕಮ್ಮನಹಳ್ಳಿಯಲ್ಲಿ ಮಹಿಳೆಯೊಬ್ಬರು ಜಾತಿಯ ಹೆಸರಿನಲ್ಲಿ ಬೈಯ್ಯುವುದು, ಕೆಟ್ಟದಾಗಿ ವರ್ತಿಸುವುದು ನಡೆಯುವುದಿಲ್ಲ, ಹಾಗೇನಾದರು ಆದಲ್ಲಿ ನಾವು ಸುಮ್ಮನಿರುವುದಿಲ್ಲ, ನಮ್ಮ ಏರಿಯಾದಲ್ಲಿ ದ.ಸಂ.ಸ. ಸಕ್ರಿಯವಾಗಿದ್ದು ನಮಗೆ ಧೈರ್ಯ ನೀಡಿದೆ ಎಂದು ಹೇಳಿದರು. ಬಸವೇಶ್ವರನಗರ ಮತ್ತು ಗೆಳೆಯರ ಬಳಗದಲ್ಲಿರುವ ವಾರ್ಡುಗಳಲ್ಲಿ ಕೆಲವು ಮಹಿಳೆಯರು ತಾವು ಬೇಕೆಂದೇ ಮನೆಯಿಂದ ದೂರವಿರುವ ವಾರ್ಡುಗಳಲ್ಲಿ ಕೆಲಸಕ್ಕೆ ಹೋಗುತ್ತೇವೆ, ಮನೆಯ ಹತ್ತಿರವಿರುವವರಿಗೆ ನಾವು ಮಾಡುವ ಕೆಲಸವೇನೆಂದು ಗೊತ್ತಾಗುವುದಿಲ್ಲ. ನಮ್ಮ ಕೆಲಸ ಏನೆಂದು ಗೊತ್ತಾದರೆ ಜನ ಆಡಿಕೊಳ್ಳುತ್ತಾರೆ, ಕೀಳಾಗಿ ಕಾಣುತ್ತಾರೆ ಎಂದು ಹೇಳಿದರು.

ಕೆಲಸಗಾರರಲ್ಲಿ ಎಲೆ ಅಡಿಕೆ, ಹೊಗೆಸೊಪ್ಪು, ಗುಟ್ಕಾ

ತಿನ್ನುವುದು, ಕುಡಿಯುವುದು ಸಾಮಾನ್ಯ. ಗಬ್ಬು ನಾರುವ ಕಸ ಎತ್ತುವ ಕೆಲಸದಿಂದ ವಿಪರೀತ ಮೈಕೈ ನೋವಾಗುವುದರಿಂದ "ಕುಡಿಯಲೇಬೇಕು ನಾವು" ಎಂದು ಅನೇಕರು ಹೇಳಿದರು. ಮಳೆಗಾಲದಲ್ಲಂತೂ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ. ಒದ್ದೆ, ಕೊಚ್ಚೆಯಾಗುವ ಕಸವನ್ನು ಎತ್ತುವಾಗ ಕಲುಷಿತ ನೀರು ಮೈಮೇಲೆಲ್ಲ ಸುರಿಯುತ್ತದೆ. ಕುಡಿಯುವುದು ಅವರ ಆರೋಗ್ಯ ಸ್ಥಿತಿ ಮತ್ತು ಆರ್ಥಿಕ ಸ್ಥಿತಿಯನ್ನು ಮತ್ತಷ್ಟು ಹಾಳು ಮಾಡುತ್ತದೆ.

ಗರ್ಭಿಣಿ ಮಹಿಳೆಯರಿಗೆ ಹೆರಿಗೆ ರಜೆಯಾಗಲಿ, ಗರ್ಭಿಣಿಯರಿಗೆಂದು ಸುಲಭದ ಕೆಲಸ ನೀಡುವುದಾಗಲಿ ಯಾವುದೂ ಇಲ್ಲ. ಹೆರಿಗೆಯಾದ ಮೇಲೆ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವ ಗ್ಯಾರಂಟಿಯಾಗಲಿ ಇಲ್ಲ. ಕೆಲವೆಡೆ ಹೆರಿಗೆ ರಜೆಯೆಂದು ಹೋದಾಗ ಅವರ ಪರವಾಗಿ ಗಂಡಂದಿರು ಕೆಲಸ ಮಾಡುವ ಇಲ್ಲ ಬದಲಿ ಕೆಲಸಗಾರರನ್ನು ತೆಗೆದುಕೊಂಡಿರುವ ಸಂದರ್ಭಗಳುಂಟು.

ಸಣ್ಣ ಮಕ್ಕಳಿರುವ ಹೆಂಗಸರಿಗೆ ಕ್ರೀಚ್‌ನ ಸೌಲಭ್ಯವಿಲ್ಲ. ಬಹಳಷ್ಟು ಮಹಿಳೆಯರು ಸಣ್ಣ ಮಕ್ಕಳನ್ನು ಮನೆಯಲ್ಲಿರುವ ವಯಸ್ಸಾದವರ ಬಳಿ ಬಿಟ್ಟು ಬರುತ್ತಾರೆ. ಕೆಲವು ಮಹಿಳೆಯರು ಸಣ್ಣ ಮಕ್ಕಳನ್ನು ನೋಡಿಕೊಳ್ಳುವ ಸಲುವಾಗಿ ಶಾಲೆಗೆ ಹೋಗುವ ಮಕ್ಕಳನ್ನು ಶಾಲೆ ಬಿಡಿಸಿದ್ದಾರೆ. ಕತ್ರಿಗುಪ್ಪೆಯಲ್ಲಿ ಕೆಲಸ ಮಾಡುವ ಗಂಗಮ್ಮ 'ಮಗ ನೋಡ್ಕೊಳೋರು ಯಾರೂ ಇರ್ಲಿಲ್ಲ. ವಾರ್ಡಿನ ಎಲ್ಲಾ ಬೀದಿ ಬೀದಿ ಮರದ ನೆರಳಲ್ಲಿ ನನ್ನ ಮಗುನ ಮಲಗಿಸಿ ಬೆಳೆಸಿದೀನಿ. ನನ್ನ ಮಗು ಮಲಗ್ದೆ ಇರೋ ಬೀದಿನೇ ಇಲ್ಲ ಈ ಏರಿಯದಲ್ಲಿ' ಎಂದು ಹೇಳಿದಳು. ಈಗ ಅವನು ಇದೇ ಕೆಲಸ ಮಾಡುತ್ತಾನೆ. ಎಳೆಯ ಮಕ್ಕಳು ಸಹ ಕಲುಷಿತ ವಾತಾವರಣ, ಪ್ರತಿಕೂಲ ಹವಾಮಾನಗಳಲ್ಲಿ ಬೆಳೆಯುವುದರಿಂದ ಆರೋಗ್ಯದ ಮೇಲೆ ಮಾರಕ ಪರಿಣಾಮ ಬೀರುತ್ತದೆ.

ಕೆಲಸದ ವಿಧಿನಿಯಮಗಳು

ಎಲ್ಲಾ ಸಂದರ್ಭಗಳಲ್ಲೂ ಸಾಮಾನ್ಯವಾಗಿ ಕೆಲಸವನ್ನು ಸಂಪೂರ್ಣವಾಗಿ ನಿಯಂತ್ರಿಸುವವರು ಮೇಸ್ತ್ರಿಗಳು. ತನಗೆ ಬೇಕಾದಂತೆ ವರ್ತಿಸಲು, ಅಧಿಕಾರ ಚಲಾಯಿಸಲು ಆತನಿಗೆ ಯಾವ ಲಿಖಿತ ನಿರ್ದೇಶನಗಳಿಲ್ಲ. ಎಷ್ಟೋ ವಾರ್ಡುಗಳಲ್ಲಿ ಮಾಲೀಕರನ್ನು ಕೆಲಸಗಾರರು ನೋಡೆ ಇಲ್ಲ. ಅವರಿಗೆ ತಕ್ಷಣದ ಮಾಲೀಕನೆಂದರೆ ಮೇಸ್ತ್ರಿಯೇ. ಅವರ ತೊಂದರೆ, ಸಮಸ್ಯೆಗಳನ್ನು ಹೇಳಿ ನಿವಾರಿಸಿಕೊಳ್ಳುವ ವ್ಯವಸ್ಥೆಯೇ ಇಲ್ಲ. ಹೇಳಿದರೆ ಮೇಸ್ತ್ರಿಗೆ ಹೇಳಬೇಕು. ಮೇಸ್ತ್ರಿಗೆ ಹೇಳುವುದರಿಂದ ಪ್ರಯೋಜನವು ಇಲ್ಲ.

ಆರೋಗ್ಯಾಧಿಕಾರಿಗಳು (ಎಂ.ಒ.ಎಚ್.) ಪಾಲಿಕೆಯಿಂದ ನೇಮಿಸಲ್ಪಟ್ಟವರಾಗಿದ್ದು ಅವರು ಬೇರೆ ಬೇರೆ ವಾರ್ಡುಗಳಿಗೆ ಭೇಟಿ ನೀಡಿ ಕೆಲಸಗಾರರ ಸ್ಥಿತಿಯನ್ನು ಪರಿಶೀಲಿಸುವ ಜವಾಬ್ದಾರಿ ಇರುವವರು. ಆದರೆ ಎಷ್ಟೋ ವಾರ್ಡುಗಳಲ್ಲಿನ ಕೆಲಸಗಾರರು ತಾವು ಆರೋಗ್ಯಾಧಿಕಾರಿಗಳನ್ನು ನೋಡೇ ಇಲ್ಲ ಎಂದರು. ಕೆಲವೆಡೆ ಹಲವಾರು ತಿಂಗಳಿಗೊಮ್ಮೆ ಬರುತ್ತಾರೆ, ಬಂದಾಗಲು ಕೆಲಸಗಾರರನ್ನು ಮಾತನಾಡಿಸುವ ಪ್ರಯತ್ನವನ್ನೆ ಮಾಡಿಲ್ಲವೆಂದು ಹೇಳಿದರು. ಕೆಲಸಗಾರರಿಗೂ, ಆರೋಗ್ಯಾಧಿಕಾರಿಗಳು ಇರುವುದು ಏಕೆ ಎಂದು ತಿಳಿದಿಲ್ಲ.

ಕೆಲಸಗಾರರ ಮೇಲೆ ಬೇಕಾಬಿಟ್ಟಿ ಅಧಿಕಾರ ಚಲಾಯಿಸುವುದಕ್ಕೆ ಈ ಘಟನೆ ಒಳ್ಳೆ ಉದಾಹರಣೆ. 63ಎ ವಾರ್ಡಿನಲ್ಲಿ ಕೆಲಸ ಮಾಡುವ ನಾಗಲಕ್ಷ್ಮಿ ತೊಟ್ಟಿಗೆ ಕಸ ಎತ್ತಿ ಹಾಕುತ್ತಿದ್ದಾಗ ಅಲ್ಲಿನ ನಿವಾಸಿಯೊಬ್ಬಳು ಕಸವನ್ನು ತಂದು ತೊಟ್ಟಿಯ ಪಕ್ಕಕ್ಕೆ ಎಸೆದಳು. ನಾಗಲಕ್ಷ್ಮಿ ಕಸವನ್ನು ತೊಟ್ಟಿಯಲ್ಲಿ ಹಾಕಬೇಕು ಹೊರಗಲ್ಲ ಎಂದು ಹೇಳಿದಾಗ ಆಕೆ ಕಸ ತೆಗೆಯುವುದು ನಿನ್ನ ಕೆಲಸ, ಎಲ್ಲಿ ಹಾಕಿದರು ತೆಗೆಯಬೇಕು ಎಂದು ರೇಗಿದಳು. ಆಕೆಯ ಮನೆಯಲ್ಲಿದ್ದ ಯುವಕರು ಹೊರಬಂದು ರೇಗಾಟದಲ್ಲಿ ಭಾಗಿಯಾದುದಲ್ಲದೆ ನಾಗಲಕ್ಷ್ಮಿಯನ್ನು ಹಿಡಿದು ಹೊಡೆದದ್ದರಿಂದ ಆಕೆ 15 ದಿನಗಳವರೆಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಾಯಿತು. ಮೇಸ್ತ್ರಿ ಮತ್ತು ಮಾಲೀಕರು ಘಟನೆ ನಡೆದ ಸ್ಥಳಕ್ಕೆ ಧಾವಿಸಿ ಬಂದವರು, ಮಧ್ಯಮ ವರ್ಗದ ಮಹಿಳೆಯ ಮಾತನ್ನು ಸುಲಭವಾಗಿ ಕೇಳಿಸಿಕೊಂಡು ನಾಗಲಕ್ಷ್ಮಿಯದೇ ತಪ್ಪು ಎಂದು ಬೈದು, ಆಕೆಯನ್ನು ಆರಾಮವಾಗಿ ಕೆಲಸದಿಂದ ತೆಗೆದುಹಾಕಿದರು. ಹೀಗೆ ಬೇಕಾಬಿಟ್ಟಿ ಯಾವ ವಿಚಾರಣೆಯೂ ಇಲ್ಲದೆ ಕೆಲಸದಿಂದ ತೆಗೆದುಹಾಕುವಂತಹ ಕ್ರಮ ಖಾಯಂ ನೌಕರರೊಡನೆ ಸಾಧ್ಯವೇ ಇಲ್ಲ.

ವಾಸ ಮಾಡುವ ಪರಿಸ್ಥಿತಿ

ಎಲ್ಲಾ ಕೆಲಸಗಾರರು ಕೊಳಚೆಗೇರಿಗಳಲ್ಲಿ ವಾಸ ಮಾಡುತ್ತಾರೆ. ಕೆಲವೇ ಕೆಲವು ಮಂದಿಗೆ ಮಾತ್ರ ತಮ್ಮದೆ ಸ್ವಂತ ಜೋಪಡಿಯುಂಟು, ಅದು ಕೊಳಚೆಗೇರಿಗಳಲ್ಲಿ ವಾಸ ಮಾಡುವ ಸ್ಥಳವನ್ನು ಸಕ್ರಮಗೊಳಿಸಿದ್ದರಿಂದ. ಬಹುಪಾಲು ಜನ ಬಾಡಿಗೆ ಗುಡಿಸಲುಗಳ ನಿವಾಸಿಗಳು, ಹೆಂಚಿನಮನೆ ನಿವಾಸಿಗಳು. ತಿಂಗಳಿಗೆ ರೂ. 500/- ರಿಂದ ರೂ. 700/-ರ ವರೆಗೆ ಬಾಡಿಗೆ ನೀಡುತ್ತಾರೆ. ತಮಗೆ ಸಿಗುವ ಬಡಿಗಾಸಿನಲ್ಲಿ ತಮ್ಮ ಖರ್ಚು ವೆಚ್ಚಗಳನ್ನು ಹೇಗೆ ತೂಗಿಸುತ್ತಾರೆಂಬುದರ ಬಗ್ಗೆ ಇನ್ನೊಂದು ಶೋಧನೆ ಯಾಗಬೇಕಷ್ಟೆ. ಕೆಲವು ಮಹಿಳೆಯರಿಗೆ ತಮ್ಮ ಗಂಡಂದಿರ

ಅಥವಾ ಮಕ್ಕಳ ಆದಾಯ ಮನೆ ನಡೆಸಲು ಸಹಾಯಕವಾಗಿದೆ. ಕತ್ರಿಗುಪ್ಪೆಯಲ್ಲಿ ಕೆಲಸ ಮಾಡುವ ಒಬ್ಬ ಮಹಿಳೆಗೆ ಗುಡಿಸಲಿನ ಭಾಗ್ಯವೂ ಇಲ್ಲದೆ ಟೆಂಟ್ ಹಾಕಿಕೊಂಡು ಬದುಕುತ್ತಿದ್ದಾಳೆ. ಒಬ್ಬರೆ ದುಡಿದು ಇಡೀ ಮನೆಯನ್ನು ನಡೆಸಬೇಕಾದ ಮಹಿಳೆಯರ ಪಾಡು ಕಷ್ಟದ್ದು.

ಕೆಲಸಗಾರರು ವಾಸಿಸುವ ಯಾವ ಕೊಳಚೆಗೇರಿಯಲ್ಲೂ ನೀರಿನ, ಶೌಚಾಲಯದ ವ್ಯವಸ್ಥೆ ಇಲ್ಲ. ಎಲ್ಲದಕ್ಕೂ ದೂರದ ಖಾಲಿ ಜಾಗ ಹುಡುಕಿಕೊಂಡು ಹೋಗಬೇಕು. ಎಷ್ಟೋ ಮಹಿಳೆಯರು ತಮ್ಮ ಗುಡಿಸಲಿನೊಳಗೆ ಬಕೆಟಿನೊಳಗೆ ನಿಂತು ಸ್ನಾನ ಮಾಡಿ ನೀರನ್ನು ಹೊರಚೆಲ್ಲುತ್ತಾರೆ, ಅಲ್ಲಿ ಚರಂಡಿ ವ್ಯವಸ್ಥೆಯೇ ಇಲ್ಲ. ಇಂತಹ ಸ್ಥಿತಿಯಲ್ಲಿ ನಸುಕು ಹರಿಯುವ ಮುನ್ನವೆ ಹೇಗೆ ತಯಾರಾಗಿ ಮಹಿಳೆಯರು ಕೆಲಸಕ್ಕೆ ಹೊರಡುತ್ತಾರೆಂಬುದು ಯಾರಾದರು ಕಲ್ಪಿಸಿಕೊಳ್ಳಬಹುದು. ಅನೇಕ ಕೆಲಸಗಾರರು ಕಷ್ಟಪಟ್ಟು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ. ಸರ್ಕಾರಿ ಶಾಲೆಗಳಲ್ಲೂ ಮಕ್ಕಳನ್ನು ಓದಿಸುವುದು ನಮಗೆ ಕಷ್ಟವೆಂದು ಅನೇಕ ಮಹಿಳೆಯರು ಹೇಳಿದರು. ಸರ್ಕಾರಿ ಶಾಲೆಗೂ ಪುಸ್ತಕ, ನೋಟ್ ಬುಕ್‌ನ ಖರ್ಚು ಬರಿಸುವುದೂ ಕೂಡ ಅವರಿಗೆ ಕಷ್ಟ. ನಂದಿನಿ ಲೇಔಟ್‌ನಲ್ಲಿ ಕೆಲಸ ಮಾಡುವ ಮಹಿಳೆಯೊಬ್ಬಳು ಚಿಕ್ಕ ಮಗುವನ್ನು ನೋಡಿಕೊಳ್ಳಲು ಶಾಲೆಗೆ ಹೋಗುತ್ತಿದ್ದ ಮಗಳನ್ನು ಶಾಲೆ ಬಿಡಿಸಿದ್ದಾಳೆ.

ಕಾರ್ಮಿಕರು ತಮ್ಮ ಸಂಬಳದಲ್ಲಿ ಗಣನೀಯ ಪ್ರಮಾಣವನ್ನು ವೈದ್ಯಕೀಯ ಚಿಕಿತ್ಸೆಗಾಗಿ ಖರ್ಚು ಮಾಡುತ್ತಾರೆ. ಪೆಟ್ಟುಬಿದ್ದು, ಗಾಜು, ಮೊಳೆ ಚುಚ್ಚಿಕೊಂಡು ಆಗುವ ಗಾಯಗಳು, ಅನಾರೋಗ್ಯಕರ ವಾತಾವರಣದಲ್ಲಿ ಕೆಲಸ ಮಾಡುವುದರಿಂದ ಉಂಟಾಗುವ ಖಾಯಿಲೆಗಳಿಗಾಗಿ ಖರ್ಚು ಮಾಡುತ್ತಾರೆ. ಸಣ್ಣಪುಟ್ಟ ತೊಂದರೆಗಳಿಗೆ ಖಾಸಗೀ ಆಸ್ಪತ್ರೆಗೆ ಹೋಗುತ್ತಾರೆ. ಬಯಲಿನಲ್ಲಿ ಧೂಳು, ಕಸ, ಕೊಚ್ಚೆ, ಕಲುಷಿತ ವಾತಾವರಣದಲ್ಲಿ ಸರಿಯಾಗಿ ಹೊಟ್ಟೆಗಿಲ್ಲದೆ ಎಲ್ಲಾ ಕಾಲದಲ್ಲೂ ಕೆಲಸ ಮಾಡಲೇಬೇಕಾಗಿರುವುದು ಅತ್ಯವಶ್ಯಕವಾಗಿರುವುದರಿಂದ ಗಂಭೀರವಾದ ಉಸಿರಾಟ ಸಂಬಂಧಿ ಕಾಯಿಲೆ ಬರುವುದು ಆಶ್ಚರ್ಯವೇನಲ್ಲ. ಹಸಿವು ಇಂಗಿಸಿಕೊಳ್ಳಲು ಎಲೆ ಅಡಿಕೆ ತಿನ್ನುವುದು, ಕಾಫಿ, ಟೀ ಕುಡಿಯುವುದು, ದಣಿವು ನೀಗಿಕೊಳ್ಳಲು ಕುಡಿಯುವುದು ಅವರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

ಕುಡಿತದ ಸಮಸ್ಯೆ, ಕುಟುಂಬದೊಳಗಿನ ಹಿಂಸೆ ಮಹಿಳೆಯರ ಬದುಕಿನ ರೀತಿಯಾಗಿಬಿಟ್ಟಿದೆ. ಕುಡುಕ ಗಂಡಂದಿರಿಂದ ಬೈಯ್ಯಿಸಿಕೊಳ್ಳುವುದು, ಹೊಡೆಸಿಕೊಳ್ಳುವುದು ನಿತ್ಯಕರ್ಮ. ಒಬ್ಬ ಮಹಿಳೆ ತನ್ನ ಬೆಳೆದ ಗಂಡುಮಕ್ಕಳಿಂದಲೂ ಹೊಡೆತ ತಿನ್ನುವುದಾಗಿ ಹೇಳಿದಳು. ಮೈ ಮುರಿಯುವ ದುಡಿತದಿಂದಾಗುವ ದಣಿವನ್ನು ಮರೆತು ನಿದ್ದೆ ಮಾಡಲು ಅನೇಕ ಮಹಿಳೆಯರು ಕುಡಿಯುತ್ತಾರೆ. ಇವೆಲ್ಲವನ್ನು ಅನುಭವಿಸಿ ಮತ್ತೆ ನಸುಕಿನಲ್ಲೇ ಎದ್ದು ಮಾಮೂಲಿಯಾಗಿ ಕೆಲಸ ಮಾಡಬೇಕು. ಕಾಯಿಲೆ, ಕೆಲಸ ಕಳೆದುಕೊಳ್ಳುವುದನ್ನು ಬಿಟ್ಟರೆ ಯಾವ ಬ್ರೇಕೂ ಇಲ್ಲದೆ ನಿರ್ದಯವಾಗಿ ನಡೆಯುತ್ತದೆ ಅವರ ದುಡಿಮೆಯ ಬದುಕು.

ಮಾಡುವ ಕೆಲಸಕ್ಕೆ ಎಷ್ಟು ಸಂಬಳ ಬಯಸುತ್ತೀರೆಂದು ಕೇಳಿದಾಗ, ಬಹಳಷ್ಟು ಕೆಲಸಗಾರರು ಆಶ್ವಾಸನೆ ಇತ್ತಿರುವಂತೆ ಕನಿಷ್ಟ ವೇತನ ನೀಡಿದರೆ ಸಾಕೆಂದರು. ಒಬ್ಬ ಮಹಿಳೆಯಂತೂ "ಕನಿಷ್ಟ ವೇತನ ನೀಡಿದರೆ ಪಾದಕ್ಕೆ ಹೂಹಾಕಿ ಪೂಜೆ ಮಾಡುವೆ" ಎಂದಳು. ಅಪಾಯಕಾರಿ ಕೆಲಸದ ವಾತಾವರಣ, ಉದ್ಯೋಗ ಭದ್ರತೆ, ಸಾಮಾಜಿಕ ಭದ್ರತೆ ಇಲ್ಲದಿರುವುದು ಕನಿಷ್ಠ ವೇತನದಿಂದ ಸರಿಹೋಗುವಂತಹುದಲ್ಲ. ಸರ್ಕಾರಿ ಉದ್ಯೋಗದಲ್ಲಿ ಕೆಳ ದರ್ಜೆಯಲ್ಲಿರುವ ಖಾಯಂ ಪೌರಕಾರ್ಮಿಕರು ತೆಗೆದುಕೊಳ್ಳುವ ಸಂಬಳಕ್ಕೆ, ಗುತ್ತಿಗೆ ಪೌರಕಾರ್ಮಿಕರು ತೆಗೆದುಕೊಳ್ಳುವ ಸಂಬಳವನ್ನು ಹೋಲಿಸಿದರೆ ವ್ಯತ್ಯಾಸ ಅಜಗಜಾಂತರದ್ದು. ಖಾಯಂ ನೌಕರರಿಗೆ ರೂ. 4,000/-ಗಿಂತ ಹೆಚ್ಚಿನ ಸಂಬಳ, ರಜೆ, ವೈದ್ಯಕೀಯ ಸೌಲಭ್ಯ, ಸ್ವಲ್ಪಮಟ್ಟಿನ ಸಾಮಾಜಿಕ ಭದ್ರತೆ ಉಂಟು. ಮಹಿಳೆಯೊಬ್ಬಳು ಬಾಕಿ ವಿದ್ಯುತ್ ಬಿಲ್ ಭರಿಸಲಾಗದೆ ಕತ್ತಲೆಯಲ್ಲೇ ಬದುಕುತ್ತಿದ್ದಾಳೆ. ವಿದ್ಯುತ್ ಬಿಲ್ ಕೂಡ ಆಕೆ ಭರಿಸಲಾಗದಂತಹ ಮೊತ್ತ. ಆಕೆ ಮಾತ್ರ ನಮಗೆ ತಿಂಗಳಿಗೆ ರೂ. 5,000/- ಸಂಬಳ ಸಿಕ್ಕಿದರೆ ಯೋಗ್ಯ ಜೀವನ ನಡೆಸಲು ಸಾಧ್ಯವೆಂದು ಹೇಳಿದರು. ಅದಕ್ಕಿಂತ ಕಡಿಮೆ ಸಂಬಳ ಸಿಗುವುದು ಹೀನಾಯ ಬದುಕನ್ನು ಕೊಂಚ ಉತ್ತಮ ಪಡಿಸಿದಂತೆ.

ಪಾಲಿಕೆಯ ಆಯುಕ್ತರೊಡನೆ ಭೇಟಿ

ಸಂಶೋಧನ ಸಮಿತಿಯವರು ದಿನಾಂಕ 31-1-2002ರಂದು ಮಧ್ಯಾಹ್ನ 3-30ಕ್ಕೆ ಬೆಂ.ಮ. ಪಾಲಿಕೆಯ ಆಯುಕ್ತರಾದ ಶ್ರೀ ಅಶೋಕ ದಳವಾಯಿಯವರನ್ನು ಭೇಟಿ ಮಾಡಿ ಮಾತನಾಡಿಸಿದರು. ಅವರೊಡನೆ ನಡೆಸಿದ ಮಾತುಕತೆಯ ಸಾರಾಂಶವಿದು.

ಪಾಲಿಕೆಯು ಟೆಂಡರ್ ಕರೆದಾಗ ಕಡಿಮೆ ಬೆಲೆ ನಮೂದಿಸಿರುವವರನ್ನು ಪರಿಗಣಿಸುತ್ತದೆ. ಹಿಂದಿನಿಂದಲೂ ಕಡಿಮೆ ನಮೂದಿಸಿದವರಿಗೆ ಆದ್ಯತೆ ನೀಡುತ್ತಾ ಬಂದಿದ್ದು ಆ

ಪೊತ್ತದಲ್ಲಿ ಕಾರ್ಮಿಕರಿಗೆ ಅನುಕೂಲವಾಗುತ್ತದೆಯೇ ಎಂಬುದಕ್ಕೆ ಗಮನ ನೀಡಿಲ್ಲ. ಕಾರ್ಮಿಕರು ಒಗ್ಗಟ್ಟಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವುದು, ಕಾರ್ಮಿಕರ ಅನುಕೂಲಗಳ ಕಡೆ ಗಮನ ಹರಿಸುವಂತೆ ಮಾಡಿದೆ. ಇಲ್ಲಿಯವರೆಗೂ ಗುತ್ತಿಗೆ ಕಾಯಿದೆಯ ನಿಯಮಗಳ ಕಡೆಗೆ ಗಮನ ಹರಿಸಿರಲಿಲ್ಲ. ಇನ್ನು ಮುಂದೆ ನಿಯಮಗಳು ಸೂಕ್ತವಾಗಿ ಜಾರಿಯಾಗಲು ಪ್ರಯತ್ನಿಸುತ್ತೇವೆ. ಕಾರ್ಮಿಕರಿಗೆ ತೊಂದರೆಯಾಗಿದೆ. ಅವರಿಗೆ ಹೆಚ್ಚಿನ ಸಂಬಳ ಹಾಗೂ ಹೆಚ್ಚಿನ ಸೌಲಭ್ಯಗಳು ಸಿಗುವಂತಾಗಬೇಕು. ಅವರಿಗೆ ಕೆಲಸ ಸುಲಭವಾಗುವಂತೆ ಮಾಡಲು ಹಗುರಾವಾದ, ಸುಲಭವಾಗಿ ತಳ್ಳುವಂತಹ ಗಾಡಿಗಳನ್ನು ನೀಡುವ ಉದ್ದೇಶವಿದೆ. ಹೆಂಗಸರಿಗೆ ತಳ್ಳಲು ಕಷ್ಟವಾಗುವುದರಿಂದ, ಹೆಚ್ಚು ಜನ ಗಂಡಸರನ್ನು ತೆಗೆದುಕೊಳ್ಳಬೇಕೆಂದಿದ್ದೇವೆ. ಈಗಿರುವ ತಳ್ಳುಗಾಢಿಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಲು ರಸ್ತೆಗಳು ಸರಿಯಿಲ್ಲದಿರುವುದು ಕಾರಣ. ಖಾಯಂ ಕಾರ್ಮಿಕರು ಮೊದಮೊದಲಿಗೆ ತಳ್ಳುಗಾಡಿಗಳು ಸೂಕ್ತವಲ್ಲವೆಂದುಕೊಂಡಿದ್ದರು. ಈಗ ಅದರ ಉಪಯೋಗ ಅಭ್ಯಾಸವಾಗಿರುವುದರಿಂದ ಕೆಲಸ ಸುಲಭವಾಗಿ ಆಗುತ್ತಿದೆ ಎನ್ನುತ್ತಾರೆ.

ಗುತ್ತಿಗೆಯನ್ನು ವೃತ್ತಿಪರ ಗುತ್ತಿಗೆದಾರರಿಗೆ ನೀಡುವುದರಿಂದ ಬದಲಾವಣೆಗಳೂ ಬರಬಹುದು. ಇಂದಿನ ಖಾಸಗೀಕರಣದ ಸಂದರ್ಭದಲ್ಲಿ ಕೆಲಸಗಾರರನ್ನು ಖಾಯಂಗೊಳಿಸುವ ಬದಲು ಸ್ವಚ್ಛತೆಯ ಕೆಲಸವನ್ನು ಖಾಸಗಿಯವರಿಗೆ ನೀಡುವುದು ಸೂಕ್ತವೆನಿಸುತ್ತದೆ. ನಗರಪಾಲಿಕೆಯನ್ನೇ ತೆಗೆದುಕೊಂಡರೆ, ಮೊದಲು ಪಾಲಿಕೆಯದೇ ವಾಹನಗಳಿದ್ದವು. ಈಗ ವಾಹನಗಳನ್ನು ಬಾಡಿಗೆಗೆ ತೆಗೆದುಕೊಳ್ಳುತ್ತೇವೆ. ನಮ್ಮ ಇಲಾಖೆಯ ಹಲವು ವಿಭಾಗಗಳಲ್ಲಿ ಶೇಕಡ 20ರಷ್ಟು ಕೆಲಸಗಾರ ಕೊರತೆ ಇದೆ. ಕೆಲಸಗಾರರನ್ನು ತೆಗೆದುಕೊಳ್ಳುವುದಕ್ಕಿಂತ ಆ ಕೆಲಸವನ್ನು ಉಪಗುತ್ತಿಗೆಗೆ ನೀಡಲು ಯೋಚಿಸುತ್ತಿದ್ದೇವೆ. ಪಾಲಿಕೆಯು ಸಂಗ್ರಹಿಸುವ ತೆರಿಗೆಯಲ್ಲಿ ಹೆಚ್ಚುಕಡಿಮೆ ಶೇಕಡ 90ರಷ್ಟು ಪಾಲಿಕೆ ಕೆಲಸಗಾರರ ಸಂಬಳಕ್ಕೆ ವ್ಯಯವಾಗುತ್ತದೆ. ಅದನ್ನು ಕಡಿತಗೊಳಿಸಲೇಬೇಕು. ಇಲ್ಲದಿದ್ದರೆ ಅಭಿವೃದ್ಧಿ ಸಾಧ್ಯವಿಲ್ಲ. ಕಡಿಮೆ ಜನರಿಂದ, ಅವರಿಗೂ ಹೆಚ್ಚಿನ ಸೌಲಭ್ಯ ನೀಡಿ, ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಿಸುವುದು ಸಾಧ್ಯ. ಪಾಲಿಕೆಯು ಸ್ವಚ್ಛತೆಗೆ ಆದ್ಯತೆ ನೀಡುತ್ತದೆ.

ಬೆಂಗಳೂರು ಕಾರ್ಯ ನಿರತ ಪಡೆಯವರನ್ನು ಭೇಟಿಯಾಗಲು ನಡೆಸಿದ ಪ್ರಯತ್ನ

ಸತ್ಯ ಶೋಧನ ಸಮಿತಿಯವರು ಬೆಂಗಳೂರು ಕಾರ್ಯ ನಿರತ ಪಡೆಯುವರನ್ನು ಭೇಟಿ ಮಾಡಲು ಪ್ರಯತ್ನಿಸಿತು. ದಿನಾಂಕ 1-2-2002ರಂದು ಬೆಂಗಳೂರು ಕಾರ್ಯ ನಿರತ ಪಡೆಯ ಸದಸ್ಯರೊಬ್ಬರೊಂದಿಗೆ ಸಂದರ್ಶನಕ್ಕೆಂದು ಸಮಯ ನಿಗದಿ ಪಡಿಸಿಕೊಂಡು ಹೋದಾಗ ಆ ಸದಸ್ಯರು ಭೇಟಿಯಾಗಲು ಸಿಗಲಿಲ್ಲ. ಅವರು ಬೇರೊಬ್ಬರನ್ನು ಭೇಟಿಯಾಗಲು ಹೋಗಿರುವುದರಿಂದ, ಭೇಟಿಯಾಗಲು ಸಾಧ್ಯವಿಲ್ಲವೆಂದು ತಿಳಿಸಿದರು. ಸಮಿತಿಯವರಿಗೆ, ಬೆಂಗಳೂರು ಕಾರ್ಯ ನಿರತ ಪಡೆಯ ಚಟುವಟಿಕೆಗಳನ್ನು ವಿವರಿಸುವ ಮೆರಗಿನ ಕಿರು ಪುಸ್ತಕವನ್ನು ನೀಡಿದರು.

ಬೆಂಗಳೂರು ಕಾರ್ಯ ನಿರತ ಪಡೆಯನ್ನು ಸರ್ಕಾರ ಪ್ರಾರಂಭಿಸಿದ್ದು, ಅವರು ಸ್ವಚ್ಛ ಬೆಂಗಳೂರು ಆಂದೋಲನದ ಭಾಗಿಗಳು. ಸ್ವಚ್ಛತೆ ಅವರ ಪರಮ ಆದ್ಯತೆಯಾಗಿದೆ. ನಗರ ಸ್ವಚ್ಛತೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿರುವ ಅರೆಹೊಟ್ಟೆಯ ಕಾರ್ಮಿಕರ ಬಗ್ಗೆ ಬೆಂಗಳೂರು ಕಾರ್ಯ ನಿರತ ಪಡೆಯು ಗಮನ ಹರಿಸದೆ ಇರುವುದು ದುರದೃಷ್ಟಕರ. ಅವರ ಎಲ್ಲಾ ಚಟುವಟಿಕೆಗಳು ಹೇಗೆ ನಗರವನ್ನು ಸ್ವಚ್ಛ ಮಾಡಬೇಕೆಂಬುವುದರ ಬಗ್ಗೆಯೇ ಹೊರತು ಸ್ವಚ್ಛ ಮಾಡುವ ಕಾರ್ಮಿಕರ ಬಗ್ಗೆಯಲ್ಲ.

ಕರ್ನಾಟಕದ ಬೇರೆ ಬೇರೆ ನಗರ ಪಾಲಿಕೆಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು ಐವತ್ತು ಸಾವಿರ ಗುತ್ತಿಗೆ ಪೌರಕಾರ್ಮಿಕರ ಪರಿಸ್ಥಿತಿಯು ಇದೇ ರೀತಿಯಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಯ ಗುತ್ತಿಗೆ ಪೌರಕಾರ್ಮಿಕರ ಹೋರಾಟದಿಂದ ಬದಲಾವಣೆಯಾದರೆ, ಹೋರಾಟದ ಫಲವು ಕರ್ನಾಟಕದ ಎಲ್ಲಾ ಐವತ್ತು ಸಾವಿರ ಪೌರಕಾರ್ಮಿಕರಿಗೂ ಅನ್ವಯವಾಗುತ್ತದೆ.

ಗುತ್ತಿಗೆ ಪೌರಕಾರ್ಮಿಕರ ಬೇಡಿಕೆಗಳು

1. ಕನಿಷ್ಠ ವೇತನದ ಜೊತೆಗೆ ಬೇರೆಲ್ಲ ನ್ಯಾಯಬದ್ಧ ಸೌಲಭ್ಯಗಳನ್ನು ಎಲ್ಲಾ ಕಾರ್ಮಿಕರಿಗೂ ನೀಡಬೇಕು.
2. ಸಂಬಂಧಪಟ್ಟ ಪಾಲಿಕೆ ಮತ್ತು ಕಾರ್ಮಿಕ ಇಲಾಖೆ ಅಧಿಕಾರಿಗಳು, ವೇತನ ನೀಡುವ ದಿನ, ಸಮಯ, ಸ್ಥಳದಲ್ಲಿ ಉಪಸ್ಥಿತರಿರಬೇಕು.
3. ಎಲ್ಲಾ ವಿಧಿ ನಿಯಮಗಳು ಜಾರಿಗೊಂಡಿರುವುದನ್ನು

ಪಾಲಿಕೆ ಮತ್ತು ಕಾರ್ಮಿಕ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಖಚಿತ ಪಡಿಸಿಕೊಳ್ಳಬೇಕು.

4. ಕಾನೂನಿನನ್ವಯ ಗುರುತಿನ ಚೀಟಿ ಮತ್ತು ವೇತನ ಚೀಟಿ ನೀಡಬೇಕು.

5. ಮುಖ್ಯ ಮಾಲೀಕನಾದ ಮಹಾನಗರ ಪಾಲಿಕೆಯು ಎಲ್ಲಾ ಗುತ್ತಿಗೆ ಕಾರ್ಮಿಕರನ್ನು ಇಷ್ಟು ವರ್ಷದ ಸೇವಾವಧಿಯೊಂದಿಗೆ ಖಾಯಂಗೊಳಿಸಬೇಕು.

6. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಕೆಲಸ ಮಾಡುವ ಸ್ಥಳದಲ್ಲಿ ನಡೆಯುವ ಲೈಂಗಿಕ ಕಿರುಕುಳವನ್ನು ತಡೆಯಬೇಕು.

7. ಅಸ್ಪೃಶ್ಯತೆ ವಿರುದ್ಧ ಕ್ರಮ ಜರುಗಿಸಬೇಕು.

8. ಗುತ್ತಿಗೆ ನಿಯಮದ ಪ್ರಕಾರ ಮಹಿಳೆಯರಿಗೆ ಸಮಾನವೇತನ ನೀಡಬೇಕು.

9. ಗುತ್ತಿಗೆ ಪೌರಕಾರ್ಮಿಕರಿಗೆ ಸಮವಸ್ತ್ರ, ಬ್ಯಾಡ್ಜ್, ಗಂಬೂಟ್‌ಗಳು, ಗ್ಲಾಸುಗಳು ಇತ್ಯಾದಿ ಸುರಕ್ಷಿತ ಸಲಕರಣೆಗಳನ್ನು ನೀಡಬೇಕು.

10. ಸೂಕ್ತ ವೈದ್ಯಕೀಯ ಸೌಲಭ್ಯಗಳನ್ನು ನೀಡಬೇಕು.

ಕ್ರಮವಾಗಿ ಘಟನೆಗಳ ವಿವರ

ದಿನಾಂಕ	ಘಟನೆಗಳು
ಆಗಸ್ಟ್ 2001	ಬೆಂಗಳೂರು ಮಹಾನಗರ ಪಾಲಿಕೆಯ ಮುಂದೆ ಧರಣಿ ಮಾಡಿದರು.
ಆಗಸ್ಟ್ 13, 2001	ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಕನಿಷ್ಟ ವೇತನವನ್ನು ಚೆಕ್ ಮೂಲಕವೇ ನೀಡಬೇಕೆಂದು ಆದೇಶ ಹೊರಡಿಸಿದರು.
ಸೆಪ್ಟೆಂಬರ್ 31, 2001	ಕಾರ್ಮಿಕ ಆಯುಕ್ತರ ಕಛೇರಿಯ ಮುಂದೆ ಧರಣಿ
ಅಕ್ಟೋಬರ್ 31, 2001	ಕಾರ್ಮಿಕ ಇಲಾಖೆಯು ಹೊರಡಿಸಿರುವ ಜ್ಞಾಪಕ ಪತ್ರದ ಪ್ರಕಾರ ದಿನಕ್ಕೆ ನಿಗದಿಪಡಿಸಿರುವ ರೂ. 71-80/-ಗಳು ಕಟ್ಟಡ ಕಾರ್ಮಿಕರನ್ನು, ರಸ್ತೆ ದುರಸ್ತಿಗಾರರನ್ನು ಮತ್ತು ಸ್ವೀಪರ್‌ಗಳನ್ನು ಒಳಗೊಂಡಿದೆ.
ಅಕ್ಟೋಬರ್-ನವೆಂಬರ್, 2001	ಬೆಂಬಲ ಗುಂಪು ಸಂಘದವರ ಸಹಕಾರದಿಂದ ಗುತ್ತಿಗೆ ಪೌರಕಾರ್ಮಿಕರಿಗೆ ಸಂಬಂಧಪಟ್ಟ ವಿವರಗಳ ಪಟ್ಟಿಯನ್ನು ತಯಾರಿಸಿತು.
ನವೆಂಬರ್, 2001	ಹಳೆಯ ಗುತ್ತಿಗೆಯು ಮುಗಿದಾಗ ಸ್ವಚ್ಛತೆಯ ಕೆಲಸವನ್ನು ಮತ್ತೆ ಉಪಗುತ್ತಿಗೆಗೆ ನೀಡುವ ನಿರ್ಧಾರ.
ನವೆಂಬರ್-ಡಿಸೆಂಬರ್, 2001	ಸಂಘದ ಹೋರಾಟ ತೀವ್ರಗೊಂಡು 40 ವಾರ್ಡ್‌ಗಳಲ್ಲಿನ ಕಾರ್ಮಿಕರು ಗುತ್ತಿಗೆ ಮಾಲೀಕರು ನೀಡಬಯಸಿದ್ದ ಕಾನೂನು ಬಾಹಿರ ವೇತನವನ್ನು ತೆಗೆದುಕೊಳ್ಳಲು ನಿರಾಕರಿಸಿ, ಕನಿಷ್ಟ ವೇತನಕ್ಕಾಗಿ ಒತ್ತಾಯಿಸಿದರು. ಬೆಂ.ಮ.ಪಾ. ಆಯುಕ್ತರು, ತಕ್ಷಣವೆ ಕನಿಷ್ಟ ವೇತನ ಹಾಗೂ ಇತರೆ ಸೌಲಭ್ಯಗಳು ಜಾರಿಯಾಗಲು ಆದೇಶ ನೀಡಿದರು.
ಡಿಸೆಂಬರ್ 14, 2001	ಪಾಲಿಕೆ ಆಯುಕ್ತರು ಕನಿಷ್ಟ ವೇತನ ನೀಡಲು ಮತ್ತೆ ಆದೇಶ ನೀಡಿದರು.
ಜನವರಿ 5, 2002	ಗುತ್ತಿಗೆ ಪೌರಕಾರ್ಮಿಕರ ಹೋರಾಟವನ್ನು ಬೆಂಬಲಿಸಲು ಮಹಿಳಾ ಸಂಘಟನೆಗಳು, ಮಾನವ ಹಕ್ಕುಗಳ ವೇದಿಕೆಗಳು, ಸರ್ಕಾರೇತರ ಸಂಸ್ಥೆಗಳು, ಸಾಹಿತಿಗಳು, ಕಲಾವಿದರು, ಕಾರ್ಮಿಕ ಸಂಘಟನೆಗಳನ್ನೊಳಗೊಂಡ ಬೆಂಬಲ ಗುಂಪಿನ ಸ್ಥಾಪನೆ.
ಜನವರಿ 10, 2002	ಪಾಲಿಕೆ ಆಯುಕ್ತರ ಕಛೇರಿಯ ಮುಂದೆ ಕನಿಷ್ಟ ವೇತನಕ್ಕಾಗಿ ಕಾರ್ಮಿಕರ ಧರಣಿ.
ಜನವರಿ 17, 2002	ಕಾರ್ಮಿಕ ಆಯುಕ್ತರು, ಪಾಲಿಕೆಯ ಗುತ್ತಿಗೆ ಕೆಲಸವು ಕನಿಷ್ಟ ವೇತನ ನೀಡಬೇಕಾದ ಕೆಲಸಗಳ ಪಟ್ಟಿಯಲ್ಲಿ ಇಲ್ಲವೆಂಬುದನ್ನು ಬಹಿರಂಗಗೊಳಿಸಿದರು.

ಬ್ರಾಹ್ಮಣಿಕೆ, ನಾನು ಮತ್ತು ಪೌರಕಾರ್ಮಿಕರು

◆ ಸುಮತಿ

ಮಧ್ಯಮವರ್ಗ-ಚಿಕ್ಕ ವಯಸ್ಸಿನಲ್ಲಿ ಇದರ ಅರಿವು ನನಗೆ ವಿಚಿತ್ರವಾಗಿಯೇ ಇತ್ತು. ಅಂಗಡಿಗೆ ಹೋದಾಗ ಅದು ಬೇಕು, ಇದು ಬೇಕು, ಆ ಫ್ರಾಕ್ ಬೇಕು, ಈ ಚಾಕ್ಲೇಟ್ ಬೇಕು.....ಈ ಬೇಕುಗಳು ಮನಸ್ಸಿನ ಮುಂದೆ, ಕಣ್ಣಿನ ಮುಂದೆ ಹಾದು ಹೋಗುತ್ತಿದ್ದರೂ ಕೇಳಲು ಧೈರ್ಯವೂ ಇಲ್ಲ ಮತ್ತೆ ವಾಸ್ತವದ ಅರಿವು ಇದ್ದಿದ್ದರಿಂದ ನಾನು ಕೇಳಿದ್ದು ಸಿಗುವುದು ಸಾಧ್ಯವಿಲ್ಲ ಎಂದು ಗೊತ್ತು. ಹಾಗಾಗೇ ಎಷ್ಟೋ ಸರ್ತಿ ಸಹಿಸಲಾರದಷ್ಟು ಮೌನವನ್ನು ಅನುಭವಿಸಿದ್ದೇವೆ. ಅಲ್ಲದೆ, ಇವೆಲ್ಲಾ ಬರೀ ಯೋಚನೆಗಳು, ಆಸೆಗಳು....ಆಸೆಗಳು ಈಡೇರಿದರೆ "ಆಸೆ" ಎಂಬ ಪದಕ್ಕೆ ಅರ್ಥವೇನು ಎಂಬ ಕಲ್ಪನೆ-ಮಧ್ಯಮ ವರ್ಗದ ಇಂತಹ ಮೌನ ಜಸ್ಟಿಫೈಡ್ ಆದದ್ದೇ. ನಮಗೆ ದಿನಕ್ಕೆ ಊಟ ತಿಂಡಿ, ಇರಲು ಮನೆ ಹೋಗಲು ಶಾಲೆ, ಹೇಳಿಕೊಳ್ಳಲು ಅಪ್ಪ ಅಮ್ಮ....ಮೇಲೆ ಬೆಳೆಯುವುದು ಆಸೆಗಳು, ಕಂಫರ್ಟ್ಸ್, ಆದ್ರೆ ಅಗತ್ಯಗಳೇ ಇಲ್ಲದ ಬದುಕು ನನಗೆ ಕಲ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಬ್ರಾಹ್ಮಣಳಾಗಿ ಹುಟ್ಟಿದ್ದರಿಂದ ಜಾತಿಯ ಹೆಸರಿನಲ್ಲಿ ನಡೆಯುವ ಯಾವುದೇ ದೌರ್ಜನ್ಯದ ಅರಿವಾಗಲಿ, ಅನುಭವವಾಗಲಿ ಇರಲಿಲ್ಲ. ಶಾಲೆಯಲ್ಲಿ ಹೇಳುತ್ತಿದ್ದುದುಂಟು, ಜಾತಿ ಎನ್ನುವುದು ಒಂದು ಭ್ರಷ್ಟ ಪದ್ಧತಿ ಎಂದು.

ಮನೆ ಕೆಲಸ ಮಾಡಲು ಬರುತ್ತಿದ್ದ ಜಯ ಬ್ರಾಹ್ಮಣಳಲ್ಲ, ಎಂದು ನನಗೆ ಗೊತ್ತಿತ್ತು. ಆದರೆ ಕೆಲಸ ಮಾಡುವಾಗಲಿ ಮಿಕ್ಕ ಸಮಯದಲ್ಲಾಗಲಿ ಅವಳಿಗೆ ಎಲ್ಲಾ ಕಡೆ ಪ್ರವೇಶವಿತ್ತು. ಅವಳು ನನ್ನ ಅತ್ಯಂತ ಆಪ್ತ ಸ್ನೇಹಿತೆ, ಯಾರೂ ಇಲ್ಲದ ಒಂಟಿಯಾದ ನನಗೆ ಅವಳು ಜೀವದ ಗೆಳತಿ. ಅವಳ ಜೊತೆ ಕೂತು ಊಟ ತಿಂಡಿಮಾಡಿದರು, ಅವಳ ತಟ್ಟೆಯಿಂದ ನಾನು ತೆಗೆದುಕೊಳ್ಳುವುದಾಗಲಿ ಇರಲಿಲ್ಲ. ಅವಳ ಜೊತೆ ಹಾಗೆ ಸಲಿಗೆಯಿಂದ ಇದ್ದದ್ದು, ನಮ್ಮ ಕನ್ವೀನಿಯನ್ಸ್‌ಗೇ ಮತ್ತೆ ಎಲ್ಲೋ ಒಂದು ಕಡೆ ನಮ್ಮ ದೊಡ್ಡಸ್ತಿಕೆ ಮತ್ತು ವಿಶಾಲ ಮನೋಭಾವ ತೋರಿಸಿಕೊಳ್ಳುವುದಕ್ಕೆ.

ಅತೀ ಬ್ರಾಹ್ಮಣಿಕೆಯನ್ನು ಕಂಡ ನನಗೆ ಇದರ ಬಗ್ಗೆ ಹೇಸಿಗೆ ಎನಿಸಿದರೂ ಈ ಇಡೀ ಅನಿಸಿಕೆ ತುಂಬಾ ಪೇಟ್ರನೈಸಿಂಗ್ ಆಗಿರೋ ಪದಗಳಲ್ಲಿ ಹುದುಗಿತ್ತು. ಇದರ ಅರಿವು ಆದದ್ದು, ಪೌರಕಾರ್ಮಿಕರಿಗೆ ಕೆಲಸ ಮಾಡಲು ಶುರುಮಾಡಿದಾಗ ಯೂನಿಯನ್ ಸದಸ್ಯತ್ವದ ಫಾರಂ ಭರಿಸಲು ಪೌರಕಾರ್ಮಿಕರ ಹತ್ತಿರ ಹೋದಾಗ ಮೊದಲಿಗೆ ನನಗೆ ಅಪ್ಪಳಿಸಿದ್ದು ಆ ನಾತ. ಒಂದು ವಿಚಿತ್ರ ವಾಸನೆ. ನನಗೆ ಅರಗಿಸಿಕೊಳ್ಳಲಾಗದ ವಾಸನೆ, ಕೆಲಸದಲ್ಲಿ ಮುಳುಗಿದ್ದರೂ ಇದು ನಮ್ಮಂತಿರುವವರ ವಾಸನೆಯಲ್ಲಿ ಇದನ್ನು ಹೆಚ್ಚು ಸಹಿಸಲು ನನಗೆ ಆಗುವುದಿಲ್ಲ. ಈ ಭಾವನೆಯನ್ನು ಮನಸ್ಸಿನಲ್ಲಿ ಹೆಚ್ಚು ಹೊತ್ತೂ ಹೊರಲಾಗಲಿಲ್ಲ. ನನಗೆ ಮುಟ್ಟಾದ ಮೂರನೆಯ ದಿನದ ವಾಸನೆಯ ನೆನಪು. ಮುಟ್ಟು ಅಪವಿತ್ರವಲ್ಲ. ಅಮ್ಮ ನನ್ನೇನು ಆಚೆ ಕೂರ್ಸಿ ನೀರು ಕೊಡದೆ ಸಾಯಿಸಿರಲಿಲ್ಲ. ಮಿಕ್ಕ ಕಟ್ಟಾ ಬ್ರಾಹ್ಮಣರ ತರ. ಹಾಗಾದ ಮೇಲೆ ಈ ವಾಸನೆ ನನ್ನೇಕೆ ಕಾಡಬೇಕು. ಸತ್ಯ ಹೇಳ್ತೀನಿ ಈ ವಿಷಯ ಹೇಳಲೂ ಧೈರ್ಯವಿಲ್ಲದೆ ನನ್ನೊಳಗೇ ಇಟ್ಟುಕೊಂಡು ತುಂಬಾ ಒದ್ದಾಡಿದೆ. ಗೊತ್ತು, ಇದರ ಮೂಲ ನನ್ನಲ್ಲಿ ಎಲ್ಲೋ ಅಡಗಿರುವ ಬ್ರಾಹ್ಮಣ ಮಡಿವಂತಿಕೆ. ಇದರ ಅರಿವು ಭೂತದಂತೆ ನನ್ನನ್ನು ಆವರಿಸಿತು. ಇದನ್ನು ಕಿತ್ತೊಗೆಯಬೇಕು ಎಂದು ಕಾನ್‌ಶಿಯಸ್ ಆಗಿ ಕೊಲೆ ಮಾಡಿದೆ ಮತ್ತೆ ಕೆಲಸ ಮಾಡಲು ಹೋದಾಗ ಈ ಭಾವನೆ ಏನು ಕಾಡದೇ ಇಲ್ಲ. ಆದರೆ ಅದರ ಸುಳಿವೂ ಹತ್ತಿರ ಬರದಂತೆ ಭದ್ರ ಕೋಟೆಯಾಗಿ ಕೆಲಸ ಮಾಡಿದೆ.

ಅದೊಂದು ಫ್ಯಾನ್ಸಿ ಜಾತಿಯತೆಯನ್ನು ಮೀರಿದ್ದೇನೆ ಎಂದು ಕೊಳ್ಳಲು ಆದ್ರೆ ಈ ಕೆಲಸ ಮಾಡುವ ಪ್ರೋಸೆಸ್‌ನಲ್ಲಿ ಕೆಲವು ಹೆಂಗಸರು (ಪೌರಕಾರ್ಮಿಕರು) ಬಹಳ ಹತ್ತಿರವಾಗುತ್ತಾ ಬಂದರು. ಮಾರ್ಕೆಟ್‌ನಲ್ಲಿ ಪರಿಚಯವಾದ ನಾರಾಯಣಮ್ಮ ನನಗೆ ಮೊದಲು ಕಾಫಿ ಕೊಡಿಸಿದಾಗ ತೆಗೆದುಕೊಳ್ಳುವುದೋ ಬೇಡವೋ? ಎಂದು. ಅವರ ಸಂಬಳಕ್ಕಾಗಿ ಹೋರಾಡುತ್ತಿದ್ದಾರೆ ಮತ್ತೆ ನಮಗೂ ಕಾಫಿ ಕೊಡಿಸುತ್ತಾರಲ್ಲ? ಹತ್ತಿರ ಬಂದು ಕೈ ಮುಟ್ಟಿ ಪ್ರೀತಿಯಿಂದ ನಕ್ಕು ಮಾತನಾಡಿಸಿದಾಗ ಈ ಕಾಡುತ್ತಿದ್ದ ವಾಸನೆ ಮಾಯವಾಗಿ ಹೋಯಿತು. ಆಮೇಲೆ ಅಲ್ಲಿ ಇಲ್ಲಿ ಧರಣಿ ಮಾಡುವಾಗ ಸಿಕ್ಕರಂತೂ, ಎಲೆಅಡಿಕೆ ಇಸ್ಕೊಂಡು ತಿನ್ನುವುದು, ಕಾಫಿ ಕುಡಿಯುವುದು ಗ್ಯಾರಂಟಿ.

ಬ್ರಾಹ್ಮಣರು, ಮಡಿ, ಮಡಿವಂತಿಕೆಯನ್ನು ಸ್ವಚ್ಛತೆಯ ಹೆಸರಿನಲ್ಲಿ ಜಸ್ಟಿಫೈ ಮಾಡಿಕೊಳ್ತಾರೆ. ಸಾರು ಮುಟ್ಟಿದ ಕೈಯಲ್ಲಿ ಮೊಸರು ಮುಟ್ಟುವುದಿಲ್ಲ. ಸ್ನಾನ ಮಾಡದವರನ್ನು ಮುಟ್ಟುವುದಿಲ್ಲ. ಮುಟ್ಟಾದವರನ್ನು ಮುಟ್ಟುವುದಿಲ್ಲ. ಈ ಮುಟ್ಟುವುದಿಲ್ಲ ಈ ಮುಟ್ಟುವುದಿಲ್ಲ ಎನ್ನುವುದು ಗಂಡಸರಿಗೆ

ಏನೂ ಹೆಚ್ಚಿಲ್ಲ. ಯಾರಾದರೂ ಸತ್ತಾಗ ಮಾತ್ರ ಬ್ರಾಹ್ಮಣರಲ್ಲೂ ಗಂಡಸರು ಮೇಲ್ಜಾತಿಯವರು. ಸ್ವಚ್ಛತೆಯ ವಿಚಾರ ಬಂದಾಗ ಬ್ರಾಹ್ಮಣರ ಮನೆಯಲ್ಲಿ ಕಕ್ಕಸು ತೊಳೆಯುವುದು ಹೆಂಗಸರೇ ಮನೆಯಲ್ಲಿ ತೊಳೆಯುವಾಗ ಏನೂ ಅನ್ನಿಸುವುದಿಲ್ಲ. ಅಥವಾ ಅವರೇ ತೊಳೆಯಬೇಕು ಎಂದು ರೂಲ್ ಇಲ್ಲ. ಅದೊಂದು ಮೌನ ಆಜ್ಞೆ, ಹಾಗೆ ಜಾತಿಯ ವಿಷಯದಲ್ಲಿ ಅದು ಹೇಗೆ ಯಾವ ಹಕ್ಕಿನಿಂದ ಬ್ರಾಹ್ಮಣರು ಹಾಗೆ ಸಮಾಜದ ಸ್ಥಿತಿಯನ್ನು ನಿರ್ಧರಿಸುತ್ತಾರೋ ಗೊತ್ತಿಲ್ಲ. ಬ್ರಾಹ್ಮಣಳು ಎಂದಮೇಲೆ ಆ ಜಾತಿಯ ಹೊರೆ ನನ್ನ ಮೇಲೆ ಇದೆ ಎಂದು ತಿಳಿದು ತುಂಬಾನೇ ಭಯವಾಯಿತು. ಹೌದು ಅವರ ಕಚಡ ಕೆಲಸವನ್ನರಿತು ಅಲ್ಲಗಳೆಯಲು ಸಾಧ್ಯವಿಲ್ಲ. ಎಷ್ಟೋ ಯುಗಗಳಿಂದ ನಡೆಸಿಕೊಂಡು ಬಂದಿರುವ ದೌರ್ಜನ್ಯ. ಅವರು ನನ್ನವರಲ್ಲ ಎಂದು ಆಚೆ ಎಂದರೂ ಆ ಹೊರೆ ದೂರವಾದೀತೆ? ಒಂದು ಯೋಚನೆಯೂ ಬಂತು, ವಾಷಿಂಗ್‌ಸಿನ್ಸ ಪಾಪ ತೊಳೆದುಕೊಳ್ಳುವ ವಿಧಾನವಾಗಬಹುದೇ? ಆ ಯೋಚನೆಯೂ ತುಂಬಾ ಪೇಟ್ರನೈಸಿಂಗ್ ಆಗಿ ಇದೆ. ಥೂ ಈ ಕೆಲಸ ಮಾಡುವುದು ಪಾಪ ತೊಳೆದುಕೊಳ್ಳುವುದಕ್ಕಾ? ನಾನು ಈ ಕೆಲಸದಲ್ಲಿ ಇನ್ವಾಲ್ವ್ ಆಗಿದ್ದು ಅದಕ್ಕಲ್ಲ, ಖಂಡಿತ ಕೆಲಸ ಮಾಡಬೇಕು, ಮಾಡುತ್ತಾ ಹೋದೆ.

ಕಮ್ಮನಹಳ್ಳಿಲಿ ಕೆಲಸ ಮಾಡುವ ಶ್ರೀಲಕ್ಷ್ಮಿ ಹೇಳಿದ್ದು ಕಪಾಳಕ್ಕೆ ಹೊಡೆದಂತಾಯಿತು. ಕುಡಿಯುವ ನೀರೂ ಸಿಗದೆ ಕೆಲಸ ಮಾಡುವ ಈ ಕಾರ್ಮಿಕರು, ಮನೆಗಳಲ್ಲಿ ನೀರು ಕೇಳಿದಾಗ ಕಕ್ಕಸು ಮನೆಯ ಚೊಂಬಿನಲ್ಲಿ ಹಾಕುತ್ತಾರೆ ಎಂದು ಕೇಳಿದಾಗ ನನ್ನ ಮೇಲೆ ನನ್ನವರ ಮೇಲೆ ಅಸಹ್ಯವಾಯಿತು. "ಕಕ್ಕಸು ಚೊಂಬಿನಲ್ಲಿ ಕುಡಿಯುವ ನೀರು ಕೊಟ್ರೆ ನಾನು ಸುಮ್ಮನೆ ಇರುವುದಿಲ್ಲ. ಮುಖಕ್ಕುಗೀತೀನಿ" ಎಂದಳು ಶ್ರೀಲಕ್ಷ್ಮಿ. ಜಾತಿಯ ಹೆಸರಿನಲ್ಲಿ ಅಸೈನ್ ಆದವೋ ಕೆಲಸಗಳು.....ಆದ್ರೇ ಅದು ಹೇಗೆ? ಯಾರು ಮಾಡ್ತಾರೆ? ಗೊತ್ತು ಮೇಲ್ವರ್ಗದ, ಮೇಲ್ಜಾತಿಯ ಮೃಗಗಳೇ ಮಾಡುತ್ತಿರುವುದು, ಮಾಡಿದ್ದು. ಓದು ಬರಹ, ಒಟ್ಟು ಯಾವುದನ್ನಾದರೂ ಪವರ್ ಆಗಿ ಮಾಡಿಕೊಂಡು, ದುಡಿಯಲು ಯಾರಾದರೂ ಸಿಕ್ಕರೆ ಅವರನ್ನುಪಯೋಗಿಸಿಕೊಂಡು ಆಳುವುದು. ನನ್ನ ಮಾವ, "ಜುಟ್ಟು ಹಿಡಿದು ಪದ್ದು ಕಟ್ಟಿ ಆಳಬೇಕು" ಅಂತ ಹೇಳಿದಾಗಲೆಲ್ಲಾ ಮೈ ಉರಿಯುತ್ತದೆ. ಹೀಗೆ ಮಾತನಾಡಲು ಹೇಗಾದರೂ ಮನಸ್ಸು ಬರುತ್ತದೆಯೋ ಗೊತ್ತಿಲ್ಲ. ಮಾತಿನಲ್ಲೇ, ಸ್ಟೇಟಸ್, ರೋಲ್ ಮತ್ತೆ ಪವರ್ ಈಕ್ವೇಷನ್ ಮೂಡಿಬಂದಿರುತ್ತದೆ. ಇದು ಗಂಡಸುತನದ ಮತ್ತು ಜನಿವಾರದ ಭಾರ ಹೀಗೆ ಅವರನ್ನು ಆಡಿಸುತ್ತಿದೆ. "ಇತರೆಯವರು", "ಅವರನ್ನು ಎಲ್ಲಿ ಇಟ್ಟಿರಬೇಕೋ ಅಲ್ಲಿ ಇಟ್ಟಿರಬೇಕು" ಹೀಗೆಲ್ಲ ಮನೆಯವರು ಮಾತನಾಡಿಕೊಂಡಾಗ ಎದೆ ಹಾಗೇ ಸೀಳಿ ಹೋಗುತ್ತದೆ. ನಾನು ಹಾಗೇ ಒಂದು ಪಬ್ಲಿಕ್ ಟಾಯ್‌ಲೆಟ್‌ನ ತೊಳೆಯೋದು ಅಸಾಧ್ಯ ಎನ್ನಿಸುತ್ತದೆ. ಈ ಭಾವನೆಯ ಹಿಂದೆ ಇರೋದು ಕಚಡಾ ಮೇಲ್ವರ್ಗದ ಮತ್ತು ಬ್ರಾಹ್ಮಣಿಕೆಯ ಮಹಿಮೆ, ಈ ಕಸ, ಕಕ್ಕಸನ್ನೆಲ್ಲಾ ನನ್ನ ಮನಸ್ಸಿನಿಂದ ತೊಳೆದು ಹಾಕಲಾಗದಿದ್ದಾಗ ನನ್ನ ಮೇಲೆ ಸಿಟ್ಟಾಗುವವಳೂ ನಾನೇ.

ಕೆಲಸ ಮಾಡುತ್ತಾ ಒಮ್ಮೆ ಒಂದು ವಾರ್ಡಿಗೆ ಹೋದಾಗ ಅಲ್ಲಿ ಇದ್ದ ಕಂಟ್ರಾಕ್ಟರುಗಳು, ಕಾರ್ಮಿಕರನ್ನು ನಾಯಿಗಳಂತೆ ಬೈತಾ ಇದ್ರು ಅವರು ಅಟೆಂಡೆನ್ಸ್ ತಗೋಬೇಕಿತ್ತು. ನಾವು ಹೋದದ್ದು ಅವರಿಗೆ ತುಂಬಾ ತೊಂದರೆಯಾಯಿತು. ಬೈಗುಳ ಜಾಸ್ತಿನೇ ಆಯ್ತು. ಆ ಭಾಷೆ, ಬ್ರಾಹ್ಮಣಿಕೆಯ ಮಧ್ಯಮ ವರ್ಗದ ಡೀಸೆಂಟ್ ಭಾಷೆಯ ಸರಹದ್ದನ್ನು ಮೀರಿ ಹಲ್ಲು ಕಡಿಯುವಂತೆ ಮಾಡಿದ್ದು, ತುಂಬಾ ಸ್ಟೈಲಾಗಿ ನನಗೆ ಮಾತ್ರ ಆಗಲಿಲ್ಲ, ಅವರಿಗೆ ಅಭ್ಯಾಸವಾಗಿ ಹೋಗಿದೆ, ಎಂದುಕೊಂಡಿದ್ದೆ. ಅವತ್ತು ಧರಣಿಗೆ ಹೋದಾಗ ಲಕ್ಷ್ಮಮ್ಮ, ಅರುವತ್ತು ವರ್ಷದ ಮುದುಕಿ, ಅವರು ಮಾತಾಡ್ತಾ ಹೇಳಿಕೊಂಡು ಅತ್ತು "ನನ್ನ ಮೊನ್ನೆ ಆ ಕಂಟ್ರಾಕ್ಟರು ಹೇಗಂದ ಗೊತ್ತಾಮ್ಮ, 'ಹೊಟ್ಟೆಗೇನು ಹೇಲು ತಿಂತಿಯ, ಕೆಲಸ ಮಾಡಕ್ಕೇನು ರೋಗ' ಹಾಗೆ ಹೀಗೆ, ಅವನಿಗೆ ವಯಸ್ಸಿನ ಪರಿವೆಯೂ ಇಲ್ವಾಮ್ಮಾ, ನನ್ನವರು ಅಂತ ಯಾರೂ ಇಲ್ಲ ಸಾಯ್‌ಬಾರ್ದು ಅಂತ ಈ ಕೆಲಸ ಮಾಡಿಕೊಂಡು ಬದುಕ್ತಾ ಇದ್ದೀನಿ, ಮಾಡೋ ಕೆಲಸಕ್ಕೆ ಮರ್ಯಾದಿನಾದ್ರೂ ಬೇಡ್ವಾಮ್ಮ" ಮತ್ತೊಂದು ಕೋಟೆಯ ತಳ ಅಲ್ಲಾಡಿ ಕಿತ್ತುಹೋದ ಅನುಭವ, "ಸುಸಂಸ್ಕೃತ ಭಾಷೆ ನಮ್ಮ ಸ್ವತ್ತು".....ಧರಣಿಯಲ್ಲಿ ಈಗ, ಸರೋಜ, ಶ್ರೀಲಕ್ಷ್ಮಿ, ಅಥವಾ ಲಕ್ಷ್ಮಮ್ಮ ಅಥವಾ ಯಾರಾದರೂ ಸಿಕ್ಕಾಗ ಕೈಕೈ ಹಿಡಿದೇ ಮಾತಾಡುವುದು, ಎಲೆ ಅಡಿಕೆನೂ ಸಿಗುತ್ತೆ ನಂಗೆ, ಅವರ ಜೊತೆ ಕೂತು ಜೋರಾಗಿ ಗಂಟಲು ಕಿತ್ತು ಹೋಗುವ ಹಾಗೆ ಘೋಷಣೆಗಳನ್ನು ಕೂಗುವಾಗ, ನಾನು ನಾನಾಗಿಯೇ ಆದರೂ ಅವರ ಹಕ್ಕುಗಳಿಗಾಗಿ ಹೋರಾಡುವುದು ನನ್ನ ಕರ್ತವ್ಯ ಎನಿಸುತ್ತದೆ. ಇದು ಬ್ರಾಹ್ಮಣಳೂ ಅಲ್ಲ, ಮೇಲ್ವರ್ಗದವಳಾಗಿ ಅಲ್ಲ. ನನ್ನಲ್ಲಿ ಒಂದು ಜೀವ ಇದೆ ಇನ್ನೊಂದು ಜೀವಕ್ಕೆ ರಿಲೇಟ್ ಮಾಡಿಕೊಳ್ಳಬಹುದು ಅಂತ.

ಪೌರಕಾರ್ಮಿಕರ ಹೋರಾಟದೊಂದಿಗೆ ನಾನು

ಲಕ್ಷ್ಮಿ ಎ.

ನಾನು ಮೊದಲು ಪೌರಕಾರ್ಮಿಕರಿಗೆ ಇರುವ ಸಮಸ್ಯೆಗಳ ಬಗ್ಗೆ ಕೇಳಿದಾಗ, ಇದು ನಿಜವೇ ಎಂದೆನಿಸಿತ್ತು. ಕಾರಣ ನಾನು ಅವರ ಸಮಸ್ಯೆಗಳನ್ನು ಹತ್ತಿರದಿಂದಾಗಲೀ ಅಥವಾ ಅದರ ಬಗ್ಗೆ ಆಳವಾಗಿಯಾಗಲೀ ಯೋಚಿಸಿರಲಿಲ್ಲ. ನಾನು ಮೊದಲಿಗೆ ALF ಆಫೀಸಿನಲ್ಲಿ ಕೇಶವಮೂರ್ತಿಯವರೊಂದಿಗೆ ಮಾತನಾಡಿದಾಗ, ನನ್ನ ಮನಸ್ಸಿಗೆ ನೋವಾಯಿತು. ಕಾರಣ ಇಷ್ಟು ದಿನ ಬರೀ ನನ್ನ ಮನೆಯವರ ಬಗ್ಗೆ ಬೀದಿಯಲ್ಲಿ ಭಿಕ್ಷೆ ಬೇಡುವ ಮಕ್ಕಳ ಬಗ್ಗೆ ಕನಿಕರವಿತ್ತು.

ನಾನು ಎರಡನೇ ಬಾರಿ ಸಭೆಗೆ ಹೋದಾಗ ಅಲ್ಲಿ ನಾನು ಮಾನಸ ಮಹಿಳಾ ಪತ್ರಿಕೆಯ ಪರವಾಗಿ ಬಂದಿದ್ದೇನೆ, ಎಂದು ಹೇಳಿಕೊಂಡೆ ಈಗ ಎಲ್ಲೋ ನಾನು ಮಾನಸದಲ್ಲಿ ಇದ್ದೇನೆ ಇದಕ್ಕಾಗಿ ಹೋಗಲೇಬೇಕು ಎಂದೆನಿಸಿತ್ತು. ಮತ್ತೆ ಇನ್ನೊಮ್ಮೆ ಮೀಟಿಂಗ್‌ಗೆ ಹೋದಾಗ ಅದು ರಾಜಾಜಿನಗರದ ನವರಂಗ್ ಟಾಕೀಸ್ ಹಿಂಭಾಗದಲ್ಲಿ ಏರ್ಪಡಿಸಲಾಗಿತ್ತು. ಅಲ್ಲಿ ಅನೇಕರು ತಮ್ಮ ನೋವುಗಳನ್ನು ನಮ್ಮೊಂದಿಗೆ ತೋಡಿಕೊಳ್ಳಲು ಬಂದಿದ್ದರು. ಅವರಲ್ಲಿ 40 ವರ್ಷಕ್ಕಿಂತ ಮೇಲ್ಪಟ್ಟು ಮತ್ತು 20 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಹಿಳೆಯರು ಬಂದಿದ್ದರು. ನಾನು ಅಲ್ಲಿ ಅವರು ಮಾತನಾಡುವುದನ್ನು ಕೇಳಿಸಿಕೊಂಡು ಸರಿ ಏನಾದರೂ ಎಲ್ಲರೂ ಸೇರಿ ಮಾಡಬೇಕು ಎಂದೆನಿಸುವುದರ ಜೊತೆಗೆ ಮನಸ್ಸಿಗೆ ನೋವುಂಟಾಗಿತ್ತು.

ಕಾರಣ ನನ್ನ ತಾಯಿಯು ಚಿಕ್ಕವಯಸ್ಸಿನಿಂದಲೇ ವ್ಯಾಪಾರ ಮಾಡಿ ನಮ್ಮನ್ನು ಓದಿಸಿ ತನಗೆ ಊಟ-ಬಟ್ಟೆ ಇಲ್ಲವಾದರೂ ಸರಿ ನಮ್ಮ ಮಕ್ಕಳು ಚೆನ್ನಾಗಿರಬೇಕಪ್ಪ ಎಂದು ಕಷ್ಟಪಟ್ಟು ಬಿಸಿಲು, ಮಳೆ ಗಾಳಿ ಎನ್ನದೆ ದುಡಿದವರು. ಈ ರೀತಿಯೆ ಅಲ್ಲಿ ಬಂದಿದ್ದ ಮಹಿಳೆಯೊಬ್ಬರೂ "ನಾವು ಎಷ್ಟು ದುಡಿದರು ಸರಿಯಾದ ಸಂಬಳವಿಲ್ಲ, ಕೆಟ್ಟದಾಗಿ ಬಯ್ಯುತ್ತಾರೆ. ಆದರೂ ನಮ್ಮ ಮಕ್ಕಳ ಭವಿಷ್ಯ ಚೆನ್ನಾಗಿರಬೇಕೆಂದು ಕೆಲಸ ಮಾಡುತ್ತಿರುವೆ" ಎಂದರು. ಎಲ್ಲೋ ಅಲ್ಲಿ ಅಂದರೆ ಆ ಪೌರಕಾರ್ಮಿಕರ ನೋವಿನಲ್ಲಿ ನನ್ನ ತಾಯಿಯ ನೋವನ್ನು ಕಂಡೆ. ಆ ದಿನ ಬಸ್ಸಿನಲ್ಲಿ ಮನೆಗೆ ಹಿಂದಿರುಗಿ ಬರುವಾಗ ಸ್ವಲ್ಪ ಕಾಲ ಕಣ್ಣುಮುಚ್ಚಿ ಯೋಚಿಸಿದೆ. ಆಗ ನನ್ನ ಕಣ್ಣ ಮುಂದೆ ಬಂದದ್ದು ಆ ಪೌರಕಾರ್ಮಿಕರು ಆ ಉರಿಯುವ ಬಿಸಿಲಿನಲ್ಲಿ ಪೊರಕೆ ಹಿಡಿದು ಬೆನ್ನು ಬಗ್ಗಿಸಿ ಆ ಧೂಳು, ಗಲೀಜಿನೊಳಗೆ, ಘೋರ ಗಲೀಜುಗಳಾಗಿ ಕಸ ಗುಡಿಸುತ್ತಿರುವುದು. ಇವರು ಮಾಡುವ ಈ ಕೆಲಸಕ್ಕೆ ಆ ಕಂಟ್ರಾಕ್ಟರ್ ಸರಿಯಾದ ಪರಿಹಾರವನ್ನು ಕೊಡುತ್ತಿದ್ದಾನೆಯೇ ಎಂದು ಯೋಚಿಸಿದಾಗ, ಇಲ್ಲ ಇದರಲ್ಲಿ ಪೌರಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ. ನಾನು ಇದಕ್ಕಾಗಿ ನನ್ನ ಕೈಯಲ್ಲಿ ಆದಷ್ಟು ಕೆಲಸ ಮಾಡಬೇಕೆಂದು ತೀರ್ಮಾನಿಸಿದೆ.

ನಂತರ ಅವರೊಂದಿಗೆ ಧರಣಿ, ಇತರ ಸಭೆಗಳಲ್ಲಿ ಕುಳಿತು ಮಾತನಾಡುವಾಗ ಅವರೊಂದಿಗೆ ನನ್ನ ಯಾವುದೋ ರೀತಿಯ ಸಂಬಂಧ ಆಕರ್ಷಿಸತೊಡಗಿತು. ನಾನು ಅವರ ಬಳಿ ಮೊದ ಮೊದಲು ಕುಳಿತಾಗ ಕುಡಿದ ವಾಸನೆ ಬಂತು ಮೂಗು ಮುಚ್ಚಿಕೊಳ್ಳೋಣ ಎಂದು ಕೊಳ್ಳುತ್ತಿದ್ದೆ. ಅವರು ಕುಡಿಯುವುದಕ್ಕೆ ಕಾರಣ ಗೊತ್ತಾದಾಗ ನನಗೆ ಆ ವಾಸನೆಯು ಸುಗಂಧದ್ರವ್ಯದ ವಾಸನೆಗಳಲ್ಲಿ ಇದು ಒಂದು ಎಂದೆನಿಸಿತು. ಅವರು ಕೆಲಸ ಮಾಡುವ ಸ್ಥಳದಲ್ಲಿ ಮುಟ್ಟಿನ, ಮಕ್ಕಳ ಕಕ್ಕಸು ಬಟ್ಟೆಗಳು ಇದ್ದಕ್ಕೆಲ್ಲ ಹೆಚ್ಚಾಗಿ ಸಾರ್ವಜನಿಕ ಶೌಚಾಲಯಗಳಿಂದ ಬಂದಂತಹ ಗಲೀಜು ಅವರು ಬರೀ ಕೈಯಲ್ಲೇ ಬಾಚುವಾಗ ಆ ವಾಸನೆಯನ್ನು ತಡೆಯುವುದಕ್ಕೆ ನಾವು ಕುಡಿಯುತ್ತೇವೆ, ಎಲೆ-ಅಡಿಕೆ ಹಾಕುತ್ತೇವೆ ಎಂದರು. ಆಗ ನನಗೆ ಖಂಡಿತ ಅವರು ಕುಡಿಯುವುದು ತಪ್ಪೇನಿಲ್ಲ ಎಂದೆನಿಸಿತು.

ಯಾವುದೋ ಒಂದು ಆಫೀಸಿಗೆ ಹೋಗಿ ಅಲ್ಲಿ 8 ಗಂಟೆಗಳ ಕಾಲ ಕುಳಿತು 2 ಗಂಟೆಗಳ ಕಾಲ ಕೆಲಸ ಮಾಡಿ ಬಂದು, ಜೊತೆಗೆ ಭಾನುವಾರ ಹಬ್ಬ ಹರಿದಿನಗಳ ರಜೆಯನ್ನು ಕೊಟ್ಟು ತಿಂಗಳು-ತಿಂಗಳು ನಿಗದಿ ಪಡಿಸಿದ ದಿನಾಂಕದಂದು ಕೈತುಂಬಾ ಸಂಬಳ ಎಣಿಸಿಕೊಂಡು ಬರುವಂತಹ ಎಷ್ಟೊ ನಾಗರೀಕರಿಗೆ ಈ 7 ಗಂಟೆಗಳ ಕಾಲ ದಿನ ಪೂರ್ತಿ ಮೈ ಬಗ್ಗಿಸಿ ಭಾನುವಾರ, ಹಬ್ಬ ಹರಿದಿನಗಳಂದು ರಜೆಯು ಇಲ್ಲದೆ ತಿಂಗಳ ಯಾವುದೋ ಒಂದು ದಿನ ಬೆರಳು ಎಣಿಸುವಷ್ಟು ಸಂಬಳ ಕೊಟ್ಟಾಗ ಅವರ ಮನಸ್ಸಿನಲ್ಲಿ ಏನು ಆಗಿರಬಹುದು ಎಂದು ಯೋಚಿಸುವುದು ಬಹಳ ಮುಖ್ಯವಾಗಿದೆ.

ನಾನು ಬಸ್ಸಿನಲ್ಲಿ ಒಮ್ಮೆ ಬರುತ್ತಿದ್ದಾಗ ಹಿಂಭಾಗ ದಲ್ಲೊಬ್ಬರು ಹೀಗೆಂದರು "ಈ ಕಾರ್ಪೊರೇಷನ್ ವರ್ಕರ್ಸ್ ನಷ್ಟು ಅದೃಷ್ಟ ಯಾರಿಗೂ ಇಲ್ಲ ನೋಡಪ್ಪ ಒಮ್ಮೆ ಪೊರಕೆ ಹಿಡಿದು ನೆಲಕ್ಕೆ ತೋರಿಸಿದರೆ ಸಾಕು ತಿಂಗಳಿಗೆ 4-5 ಸಾವಿರ ಸಂಬಳ ಬರುತ್ತೆ" ಎಂದರು. ಬಹುಶಃ ಇದು ನಿಜವೂ ಇರಬಹುದು,

ಆದರೆ ಅದು ಎಷ್ಟರಮಟ್ಟಿಗೆ ನಿಜವೆಂದರೆ ಅವರಲ್ಲಿ ಖಾಯಂ ಕಾರ್ಪೋರೇಶನ್ ವರ್ಕರ್ಸ್ ಎಂದು ಕರೆಯಲ್ಪಡುವವರಿಗೆ ಮಾತ್ರ. ಗುತ್ತಿಗೆ ಪೌರಕಾರ್ಮಿಕರಿಗಲ್ಲ ಇದನ್ನು ನಾವೆಲ್ಲರೂ ಸ್ಪಷ್ಟ ಪಡಿಸಿಕೊಳ್ಳಬೇಕು. ಈ ಗುತ್ತಿಗೆ ಪೌರಕಾರ್ಮಿಕರು, ಖಾಯಂ ಗುತ್ತಿಗೆ ಪೌರಕಾರ್ಮಿಕರಿಗಿಂತ ಎರಡು ಪಟ್ಟು ಹೆಚ್ಚು ದುಡಿಯುತ್ತಾರೆ. ಆದರೆ ಸಂಬಳ ಅರ್ಧದಷ್ಟು ಸರಿಸಮಾನತೆ ಇಲ್ಲ ತಿಂಗಳಿಗೆ 800/- ಗಳಿಂದ 1000/- ರೂ.ಗಳು ಮಾತ್ರ. ಇಷ್ಟರಲ್ಲಿ ಅವರು ಮಕ್ಕಳ ಭವಿಷ್ಯವನ್ನು ಯೋಚಿಸಿ ಹೇಗೆ ಸುಖವಾಗಿರಲು, ಸಾಧ್ಯ ಎಂದು ನೆನಸಿಕೊಂಡರೇ ಒಮ್ಮೆ ಕಣ್ಣಲ್ಲಿ ನೀರು ತುಂಬಿ, ಕರುಳು ಚುಯ್ಕಿ ಎನ್ನುತ್ತದೆ. ಅವರು ಎಷ್ಟು ಮುಗ್ಧರು ಎಂದರೆ ಪಡುತ್ತಿರುವ ಕಷ್ಟಕ್ಕೆ ತಕ್ಕ ಪರಿಹಾರ ಅವರಿಗೆ ಸಿಕ್ಕುತ್ತಿಲ್ಲ ಅಂತಾನೂ ಅವರಿಗೆ ಗೊತ್ತಿಲ್ಲ.


ನಾನು ಸತ್ಯಶೋಧನ ವರದಿಗಾಗಿ (Fact Finding Report) ವಾರ್ಡುಗಳ ಬಳಿಯೇ ಅವರನ್ನು ಭೇಟಿಯಾದಾಗ ಮಳೆ ಬರುತ್ತಿದ್ದು. ಗಲೀಜು, ವಾಸನೆಯಿಂದ ಕೂಡಿದ್ದ ರಸ್ತೆಗಳಲ್ಲಿಯೇ ಅವರು ಕುಳಿತು ಮಾತನಾಡಿದಾಗ ಅಲ್ಲಿಯೇ ಎಲೆ-ಅಡಿಕೆ, ಟೀ ತಂದು ಕುಡಿಯುತ್ತಿದ್ದಾಗ ಅಯ್ಯೋ ಇಷ್ಟೊಂದು ಗಲೀಜು ಹೇಗಪ್ಪ ಇರ್ತಾರೆ ಅಂದೆನಿಸಿತ್ತು. ಆದರೆ ಮತ್ತೊಮ್ಮೆ ಯೋಚಿಸಿದಾಗ ನನಗೆ ತೋರಿದ ನಿಜಾಂಶವೆಂದರೆ ನಾವು ನಾಗರೀಕರು ಮಾಡುವ ಈ ಗಲೀಜುಗಳನ್ನು ತೆಗೆದು ತೆಗೆದು ಗಲೀಜಿಗೂ ನಮಗೂ ವ್ಯತ್ಯಾಸವೇ ಇಲ್ಲ. ಎನ್ನುವಂತಹುದು ಸ್ಪಷ್ಟವಾಗಿ ಕಂಡುಬರುತ್ತದೆ, ಆದರೂ ಇವರು ಮನುಷ್ಯರು ಹೌದು.

ಕೆಲವು ಕಡೆ ಕೆಲವರು ನಾಗರೀಕರು ಇವರೊಂದಿಗೆ ವರ್ತಿಸುವ ರೀತಿ ಹೇಳಿಕೊಂಡಾಗ ನಾನು ನನ್ನ ಬಗ್ಗೆಯು ಪರೀಕ್ಷಿಸಿಕೊಂಡೆ. ಅದಕ್ಕೆ ಕಾರಣ ನಾನು ಒಬ್ಬ ಭಜಂತ್ರಿಯ ಜಾತಿಗೆ ಸೇರಿದ್ದು ಕೆಲವು ಮೇಲ್ಜಾತಿಯವರು ನನ್ನೊಂದಿಗೆ ವರ್ತಿಸುತ್ತಿದ್ದ ರೀತಿ, ಆದರೆ ನನಗೆ ಅಷ್ಟೊಂದು ಅನುಭವವಿಲ್ಲ. ಇವರು ನೀರು ಕೇಳಿದರೆ ಇಲ್ಲ ಅನ್ನುವುದು, ಬಾತ್‌ರೂಮಿಗೆ ಬಳಸುವ ಚೆಂಬಿನಲ್ಲಿ ಕೊಡುವುದು, ಬೊಗಸೆಗೆ ಸುರಿಯುವುದು ಇದನ್ನು ನಾನು ಯೋಚಿಸಿದಾಗ ನಮ್ಮ ಸುತ್ತಮುತ್ತ ಇರುವಂತಹ ಸೂಟ್‌ಬೂಟ್ ಹಾಕಿಕೊಂಡು ಮೇಲ್ಜಾತಿಯೆಂಬ ಹಣೆಪಟ್ಟಿ ಹಾಕಿಕೊಂಡು ದೊಡ್ಡ ದೊಡ್ಡ ಬಂಗಲೆಗಳಲ್ಲಿ ವಾಸ ಮಾಡುವವರ ಹೃದಯಗಳು ಎಷ್ಟು ಕಲ್ಮಶದಿಂದ ಕೂಡಿವೆಯಪ್ಪಾ ಎಂದೆನಿಸಿತು. ಮೊದಲು ರೋಡಿನ ಮೇಲೆ ಇರುವ ಗಲೀಜು ತೆಗೆಯುವ ಬದಲಿಗೆ ಸ್ವಚ್ಛ ನಾಗರೀಕರ ಕಲ್ಮಶ ಹೃದಯಗಳನ್ನು ಪೊರಕೆಯಿಂದ ಹಿಡಿದು ಸ್ವಚ್ಛಗೊಳಿಸಬೇಕೆನೋ ಎಂದೆನಿಸಿತ್ತು.

ಮತ್ತೊಮ್ಮೆ ಹಿಂದಿರುಗಿ ನೋಡಿದಾಗ ಎಲ್ಲಾ ನಾಗರೀಕರು, ಎಲ್ಲಾ ಮೇಲ್ಜಾತಿಗೆ ಸೇರಿದವರು ಈ ರೀತಿ ನಡೆದುಕೊಳ್ಳುವುದಿಲ್ಲ. ಅವರಿಗೂ ಇವರ ಬಗ್ಗೆ ಕನಿಕರವಿದೆ, ಎಂದೆನಿಸಿತ್ತು. ಅಂತಹ ಉದಾಹರಣೆಗಳನ್ನು ನನ್ನ ಕಣ್ಣಾರೆಯು ಕಂಡಿದ್ದೇನೆ.

ಇಷ್ಟೆಲ್ಲ ಅನ್ನಿಸಿದರೂ, ಎಷ್ಟೆ ಧರಣಿ ಹೋರಾಟ ಮಾಡಿದರು ನಮ್ಮ ಗುತ್ತಿಗೆ ಪೌರಕಾರ್ಮಿಕರಿಗೆ ಕನಿಷ್ಟ ವೇತನ, ಕನಿಷ್ಟ ಸೌಲಭ್ಯಗಳು ಸಿಗುತ್ತಿಲ್ಲವಲ್ಲ ಎಂದು ಮನಸ್ಸಿಗೆ ಬಾಧೆ ಯಾಗುತ್ತಿದೆ. ನಮ್ಮ ಸರ್ಕಾರವು ಸಹ ಇಷ್ಟೊಂದು ನಿರ್ಲಕ್ಷ್ಯದಿಂದ ನಡೆದುಕೊಳ್ಳುತ್ತಿದೆಯೇ ಎಂದು ಯೋಚಿಸುವ ಹಂತಕ್ಕೆ ಹೋಗಿದ್ದೆ, ಆದರೂ ಮನಸ್ಸಿನಲ್ಲಿ ಎಲ್ಲೋ ಇವರಿಗೆ ನ್ಯಾಯ ಸಿಗುತ್ತೆ ಇದಕ್ಕೆ ನಮ್ಮ ಸ್ನೇಹಿತರು ಎಲ್ಲರೂ ಸ್ಪಂದಿಸುತ್ತಾರೆ, ಎಂಬ ಭರವಸೆ ನನ್ನ ಮನಸ್ಸಿನಲ್ಲಿ ಬೇರೂರಿದೆ.

"ಕನಿಷ್ಟ ವೇತನ ಗುತ್ತಿಗೆ ಪೌರಕಾರ್ಮಿಕರ ಹಕ್ಕು"



ಒಂದು ಇಣುಕು ನೋಟ

ನಾವು ಮುಂಜಾನೆ ಎದ್ದು ಒಂದು ಲೋಟ ಕಾಫೀಯು ಇಲ್ಲದೆ ಮನೆಯ ಕೆಲಸವನ್ನು ಮಾಡಿ 6 ಗಂಟೆಗೆ ಮನೆಯನ್ನು ಬಿಡಬೇಕು. ನಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಜವಾಬ್ದಾರಿಯನ್ನು ಬಿಟ್ಟು ನಾವು ಕೆಲಸಕ್ಕೆ ಹೋಗಲೇಬೇಕು ಎಂಬುದಾಗಿ ಬರುತ್ತೇವೆ. ಬರುವಾಗ ರಸ್ತೆಯಲ್ಲಿ ಬಸ್ಸುಗಳ ತೊಂದರೆಯಿಂದ ಅಥವಾ ರಸ್ತೆಯ ತೊಂದರೆಗಳಿಂದ ಸ್ವಲ್ಪ ತಡವಾಗಿ ಬಂದರೆ ನಮಗೆ ಒಂದು ದಿವಸದ ಸಂಬಳ ಕಟ್ ಮಾಡಿ ಅಬ್‌ಸೆಂಟ್ ಹಾಕಿ ಮನೆಗೆ ಕಳಿಸಿ ಬಿಡುತ್ತಾರೆ.




ನಾವು ಕೆಲಸವನ್ನು ಮಾಡುವ ಸ್ಥಳದಲ್ಲಿ ಈಗ ಅಂದರೆ ಫೆಬ್ರವರಿಯಿಂದ ಏಪ್ರಿಲ್‌ವರೆಗೆ ತುಂಬಾ ಗಿಡದ ಎಲೆಗಳು ಮತ್ತು ಮರದ ಎಲೆಗಳು ಉದುರುತ್ತಿವೆ. ಅದನ್ನು ಗುಡಿಸಿ ತೊಟ್ಟಿ ಇರುವ ಸ್ಥಳಕ್ಕೆ ತರಲು ತುಂಬಾನೆ ಕಷ್ಟವಾಗುತ್ತಿದೆ. ಏಕೆ ಗೊತ್ತೆ? ರೋಡಿನಲ್ಲಿ ತೊಟ್ಟಿಗಳ ತೊಂದರೆ ಇದೆ ಅದು ಏನೆಂದರೆ ನಾವು ರಸ್ತೆಯ ತುದಿಯಲ್ಲಿ ಕಸವನ್ನು ಗುಡಿಸಿ ಅದನ್ನು ತಂದು 3ನೇ ಅಥವಾ 4ನೇ ರಸ್ತೆಯಲ್ಲಿ ಇರುವ ತೊಟ್ಟಿಗೆ ಹಾಕಬೇಕು. ಹೀಗಾಗಿ ಒಂದು ರಸ್ತೆಯನ್ನು ಗುಡಿಸಲು ಸುಮಾರು 2 ಗಂಟೆಗಳು ಬೇಕಾಗುತ್ತವೆ. ನಾವು ಕೆಲಸ ಮಾಡುವ ಜಾಗಕ್ಕೆ ಮೇಸ್ತ್ರಿ ಅಥವಾ ಯಜಮಾನ ಬಂದರೆ ನೀವು ಬೆಳಿಗ್ಗೆಯಿಂದ ಇಷ್ಟೇನ ಕೆಲಸ ಮಾಡಿರೋದು ಅಂತ ಬಾಯಿಗೆ ಬಂದ ಹಾಗೆ ಬಯ್ಯುತ್ತಾರೆ. ಎಲೆ ತುಂಬಾ ಬೆಂಕಿಯನ್ನು ಹಾಕಿದರೆ ಅಕ್ಕ ಪಕ್ಕದ ಮನೆಯವರು ಬಾಯಿಗೆ ಬಂದ ಹಾಗೆ ಬಯ್ಯುತ್ತಾರೆ.

ಗುತ್ತಿಗೆ ಪೌರ ಕಾರ್ಮಿಕ ಮಹಿಳೆಯರು, ಅವರ ಕೆಲಸದ ವೇಳೆಯಲ್ಲಿ ದಿನಸತ್ಯ ಅವರು ಎದುರಿಸುತ್ತಿರುವಂತಹ ಸಮಸ್ಯೆಗಳನ್ನು ಅಲ್ಲಿ ಸತ್ಯಶೋಧನೆಗೆ ಎಂದು ಹೋಗಿದ್ದಾಗ ನಮ್ಮೊಂದಿಗೆ ಅವರು ಹಂಚಿಕೊಂಡರು.

ಮಳೆಗಾಲ ಬಂದಾಗ ಮಳೆಯನ್ನೂ ನೋಡದೆ ನಾವು ಕೆಲಸವನ್ನು ಮಾಡಬೇಕು ಎಂಬುದಾಗಿ ಹೇಳುತ್ತಾರೆ. ನಾವು ಮಳೆಯಲ್ಲಿ ಕೆಲಸವನ್ನು ಮಾಡಲೂ ಆಗುವುದಿಲ್ಲ. ಮಳೆ ನಿಂತ ಮೇಲೆ ಮಾಡುತ್ತೇವೆ ಎಂದು ಹೇಳಿದರೆ ಸರಿ ಎಂದು ಅವರು ಹೇಳಿ ಹೋಗುತ್ತಾರೆ. ಮತ್ತೆ ಮಳೆ ನಿಂತ ಮೇಲೆ ಬಂದು ಮಳೆ ನಿಂತು ಹೋಗಿದೆ, ನೀವು ಇಷ್ಟು ಹೊತ್ತಾದರೂ ಏನು ಮಾಡಿದ್ದೀರಾ ಎಂಬುದಾಗಿ ಕೇಳುತ್ತಾರೆ. ನಾವು ಮಳೆ ನಿಂತ ಮೇಲೆ ಕೆಲಸವನ್ನು ಮಾಡಿ ಬುಟ್ಟಿಯಲ್ಲಿ ಕಸವನ್ನು ತುಂಬಿ ತೆಗೆದುಕೊಂಡು ಹೋಗುವಾಗ ಮೈ ಮೇಲೆಲ್ಲಾ ಕೊಳೆನೀರು ಸೋರುತ್ತದೆ. ಬಟ್ಟೆಯೆಲ್ಲಾ ಕೊಳೆಯಾಗುತ್ತದೆ. ನಮಗೆ ಸರಿಯಾದ ರೀತಿಯ ಅನುಕೂಲಗಳು ಸಿಗುತ್ತಿಲ್ಲ ಮತ್ತು ನಮಗೆ ಕಾಲಿಗೆ ಚಪ್ಪಲಿ ಇರುವುದಿಲ್ಲ. ಮೋರಿಯಲ್ಲಿ ಇಳಿದು, ಕಸವನ್ನು ತೆಗೆಯುವಾಗ ಕಾಲಿಗೆ ಮೊಳೆ, ಗಾಜಿನ ಚೂರುಗಳು ಚುಚ್ಚಿದರೆ ಅದಕ್ಕೆ ಸರಿಯಾದ ಔಷಧಿಗಳು ಸಿಗುವುದಿಲ್ಲ./ ಮತ್ತೆ ರಸ್ತೆಯಲ್ಲಿ ಏನಾದರೂ ಅಪಘಾತವಾದರೆ ನಮಗೆ ಆಸ್ಪತ್ರೆಯ ಅನುಕೂಲಗಳು ಇಲ್ಲ.

ನಾವು ಕೆಲಸವನ್ನು ಮಾಡುವಾಗ ನೀರನ್ನು ಕುಡಿಯಬೇಕು ಎಂದು ಅಲ್ಲಿ ಇರುವ ಮನೆಯವರನ್ನು ನೀರು ಕೇಳಿದರೆ ಅವರು ಕೈಯನ್ನು

ತೋಳದು ನಾವು ಹಾಕುವ ನೀರನ್ನು ನಿಮ್ಮ ಕೈಯಲ್ಲಿ ಕುಡಿಯಿರಿ ಎಂಬುದಾಗಿ ಹೇಳುತ್ತಾರೆ. ಮತ್ತು ರಾತ್ರಿಯ ತಂಗಳು ತಿನ್ನುತ್ತೀಯಾ ಎಂದು ಕೇಳುತ್ತಾರೆ. ನಾವು ಬೇಡವೆಂದರೆ ನಿಮಗೆ ಇರುವ ಅಹಂಕಾರ ಬೇರೆ ಯಾರಿಗೂ ಇಲ್ಲ ಎಂಬುದಾಗಿ ಹೇಳುತ್ತಾರೆ. ಮತ್ತು ಜಾತಿಯ ಬಗ್ಗೆ ಕೇವಲವಾಗಿ ಮಾತನಾಡುತ್ತಾರೆ. ನಾವು ಮನೆಯಿಂದ ಊಟ ತಿಂಡಿಯನ್ನು ತೆಗೆದು ಕೊಂಡು ಹೋಗೋಣ ಎಂದರೆ ಅದನ್ನು ಇಡಲೂ ಜಾಗ ಇಲ್ಲ, ತಿನ್ನಲೂ ಸಹ ಸರಿಯಾದ ಜಾಗವಿಲ್ಲ ಇದರಿಂದ ನಮಗೆ ತುಂಬ ತುಂಬಾನೆ ತೊಂದರೆಯಾಗಿದೆ.



ಕೆಲಸವನ್ನು ಮಾಡುವಾಗ, ಮೂತ್ರ ವಿಸರ್ಜನೆ ಮಾಡಲೂ ಜಾಗ ವಿರುವುದಿಲ್ಲ. ಎಲ್ಲಿಯಾದರೂ ಗಿಡ, ಮರಗಳು ಇರುವ ಜಾಗಕ್ಕೆ ಏನಾದರೂ ನಾವು ಹೋಗಿದ್ದಾಗ ಅಲ್ಲಿಗೆ ಯಜಮಾನ ಅಥವಾ ಮೇಸ್ತ್ರಿ (ಅಧಿಕಾರಿಗಳು) ಬಂದಾಗ ನಾವು ಅಲ್ಲಿ ಅವರಿಗೆ ಕಾಣಿಸಲಿಲ್ಲ ಎಂದರೆ ನಮಗೆ ಆ ದಿನದ ಸಂಬಳವನ್ನು ಕೊಡುವುದಿಲ್ಲ. ನಮಗೆ ಒಂದು ತಿಂಗಳಿಗೆ ಎಂಟುನೂರು ಅಥವಾ ಒಂಬತ್ತು ನೂರು ಸಂಬಳ ಬರುತ್ತದೆ. ಅದರಲ್ಲಿ ನಮ್ಮ ಮನೆಯ ಸಮಸ್ಯೆಯನ್ನು ಬಗೆಹರಿಸಲೂ ಸಾಧ್ಯವಿಲ್ಲ. ಏಕೆಂದರೆ ಮನೆಯ ಬಾಡಿಗೆ, ಮಕ್ಕಳ ಶಾಲೆಯ ಶುಲ್ಕವನ್ನು ಕಟ್ಟಲೂ ಸಾಧ್ಯವಾಗುತ್ತಿಲ್ಲ. ನಾವು ಈ ಸಂಬಳವನ್ನು ತೆಗೆದುಕೊಂಡು ಸಂಸಾರವನ್ನು ಮಾಡಲೂ ತುಂಬಾ ತೊಂದರೆಯಾಗಿದೆ. ದಿನದಿಂದ ದಿನಕ್ಕೆ ಸಾಮಾನಿನ ಬೆಲೆಯೂ ತುಂಬಾ ದುಬಾರಿಯಾಗುತ್ತ ಬರುತ್ತಿದೆ. ಆದರೆ ನಮ್ಮ ಸಂಬಳ ಮಾತ್ರ ಇದ್ದಂತೆಯೇ ಇದೆ.

ಊರಿಗೆ ಏನಾದರೂ ಹೋದರೆ 1 ಅಥವಾ 2 ದಿನ ರಜೆ ಹಾಕಿದ್ರೆ ನಮ್ಮನ್ನು ಕೆಲಸಕ್ಕೆ ಬೇಡ ಅಂತಾರೆ ಮನೆಯಲ್ಲಿ ಏನೇ ತೊಂದರೆ ಇದ್ರೂ ಅದನ್ನು ಬಿಟ್ಟು ನಾವು ಬಂದು ಹೆಂಗೆ ಕೆಲಸ ಮಾಡಬೇಕು ಅನ್ನೋದು ನಮಗೆ ತಿಳಿದಿಲ್ಲ.

ಬೆಳಿಗ್ಗೆ ಸೂರ್ಯನು ಹುಟ್ಟುವುದಕ್ಕಿಂತ ಮುಂಚೆಯೇ ಆ ಬೀದಿಗಳಲ್ಲಿ ನಡೆದುಹೋಗುವಾಗ ಅಲ್ಲಿರುವ ಬೀದಿನಾಯಿಗಳ ಕಾಟ ನಮಗೆ ದೊಡ್ಡ ಸಮಸ್ಯೆಯಾಗಿದೆ. ಎಷ್ಟೋ ಮಂದಿಗೆ ನಾಯಿ ಕಡಿದಿದೆ. ಅದಕ್ಕೆ ಚಿಕಿತ್ಸೆಗಾಗಿ ಯಾವುದೇ ರೀತಿಯ ಸೌಕರ್ಯ ಗಳಿಲ್ಲ. ಆದರ ನೋವು ಇದ್ದರೂ ಸಹ ಹೋಗಿ ಕೆಲಸ ಮಾಡಬೇಕು, ರಜೆಯೂ ಕೊಡುವುದಿಲ್ಲ.

* * *

“ನಾನು 7-8 ವರ್ಷಗಳಿಂದ ಗುಡಿಸುವ ಕೆಲಸ ಮಾಡುತ್ತಿದ್ದೇನೆ. ಸುಮಾರು 1 ವರ್ಷದಿಂದ ನನ್ನ ಕೈಕಾಲುಗಳ ಮೇಲೆ ಒಂದು ರೀತಿಯ ಗುಳ್ಳೆ ರೀತಿಯ ಅಲರ್ಜಿಯಾಗಿದೆ. ಇದಕ್ಕೆ ಆಸ್ಪತ್ರೆಗೆ ಹೋದರೆ ದೊಡ್ಡ ಆಸ್ಪತ್ರೆಗೆ ಹೋಗಿ, ಹೆಚ್ಚು ಬೆಲೆಯುಳ್ಳ ಔಷಧಿಗಳನ್ನು ತೆಗೆದುಕೊಳ್ಳಿ ಎಂದು ಸಣ್ಣ ಸರ್ಕಾರಿ ಆಸ್ಪತ್ರೆಯ ಡಾಕ್ಟರ್ ಹೇಳಿ ಕಳಿಸುತ್ತಾರೆ. ದೊಡ್ಡ ಆಸ್ಪತ್ರೆಗೆ ಹೋಗೋಣ ಎಂದರೆ, ನಮಗೆ ಬರುವ ಸಂಬಳ ಊಟಕ್ಕೆ ಸಾಕಾಗಲ್ಲ ಇನ್ನು ಔಷಧಿ ಎಲ್ಲಿ? ನಮ್ಮ ಹಣೆಬರಹವೇ ಇಷ್ಟೆ ಅನ್ನಿಸುತ್ತೆ. ಎಷ್ಟು ಹೋರಾಟ ಮಾಡಿದ್ರು ಸಂಬಳ ಮಾತ್ರ ಒಂದು ಪೈಸೆಯೂ ಜಾಸ್ತಿ ಆಗ್ತಾ ಇಲ್ಲ ಹೋಗ್ಲಿ ಬಿಡ್ರಮ್ಮ ಹೀಗೆ ಇದ್ರೆ ಆಯ್ತು” ಎಂದರು ಜಯಮ್ಮ.

* * *


ಅಚ್ಚಮ್ಮ ಎಂಬಾಕೆ ದಿಣ್ಣೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಆಕೆಗೆ ನಾವು ಅವರ ಬಳಿ ಹೋದಾಗ ಏನೋ ಸಂತೋಷ ನಾವು ಅಲ್ಲಿಗೆ ಏನಕ್ಕೆ ಹೋಗಿದ್ದೇವೆ ಎಂದು ಕೇಳಿ ತಿಳಿಯುವ ತವಕ. ಆದರೆ ನಾವು ಅವರನ್ನು ನಿಮ್ಮ ಹೆಸರು ಏನು ಎಂದಾಗ ತಮ್ಮ ಕೈಯಿಂದ ಪಕ್ಕದ ಹೆಂಗಸೊಬ್ಬರ ಕಡೆ ಸನ್ನೆ ಮಾಡಿದರು. ಆಕೆಯು ಸನ್ನೆ ಮಾಡಿದ್ದ ಸಕ್ಕುಬಾಯಿಯನ್ನು ಕೇಳಿದಾಗ ಆಕೆ ಹೇಳಿದ್ದು “ಈಕೆ ಅಚ್ಚಮ್ಮ, ಈಕೆ ಸುಮಾರು 10 ವರ್ಷಗಳಿಂದ ದಿಣ್ಣೂರಿನಲ್ಲಿ ಕೆಲಸ ಮಾಡುತ್ತಿದ್ದಾಳೆ. ಈಕೆಗೆ ಮಾತು ಬರುತ್ತಿಲ್ಲ. ಸುಮಾರು 5 ವರ್ಷಗಳ ಹಿಂದೆ ಈಕೆಗೆ ಧೂಳು ಗಂಟಲು ಸೇರಿ ಗಂಟಲು ಅಲರ್ಜಿಯಾಗಿತ್ತು, ನಂತರ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಿ ಬಂದಿದ್ದರು. ಚಿಕಿತ್ಸೆಯ ನಂತರ



ಆಕೆಯ ಮಾತು ಸಂಪೂರ್ಣವಾಗಿ ನಿಂತು ಹೋಗಿದೆ. ಇದಕ್ಕೆ ಕಾರಣ ಆಕೆ ಹೆಚ್ಚು ಧೂಳಿನಿಂದ ಕೂಡಿದ್ದ ರೋಡ್‌ನಲ್ಲಿ ಹೆಚ್ಚಾಗಿ ಕಸ ಗುಡಿಸುತ್ತಿದ್ದದ್ದೆ ಎಂದು ಸಹ ಆಕೆ ಹೇಳಿದರು.

* * *

ನಮ್ಮ ಮನೆಯಲ್ಲಿ ಹೋದ ವಾರ ಸಭೆಯನ್ನು ಮುಗಿಸಿ ಕೊಂಡು ಹೋದಾಗ ನನ್ನ ಗಂಡ ಹೊಡೆದಿದ್ದರು. 2-3 ದಿನ ಕೈ ಊದಿತ್ತು. ಕಸ ಗುಡಿಸಲು ಆಗ್ತಾನೇ ಇರ್ಲಿಲ್ಲ. ಅದ್ರೂನು ಹೇಗೋ ಕಷ್ಟಪಟ್ಟು ಕಸ ಗುಡಿಸ್ದೆ. ಆ ದಿನ ಬೆಳಗ್ಗೆ ಕೆಲ್ಸಕ್ಕೆ ಲೇಟಾಯ್ತು ಅಂತ ರಾತ್ರಿನೆ ಮಕ್ಕಳಿಗೂ ಇಟ್ಟು ನಾನು ತಿಂದು ಬಂದಿದ್ದೆ. ಆ ದಿನ Corporation ಆಫೀಸಿನ ಮುಂದೆ ಧರಣಿ ಇತ್ತು ಅದಕ್ಕೆ ಬರ್ಲೆ ಬೇಕಾಗಿತ್ತು. ಏನೋ ಧರಣಿ ನಡೆಸಿದ್ರೆ ನಮಗೆ ಸಂಬಳ ಜಾಸ್ತಿ ಮಾಡ್ತಾರೇ ಅನ್ನೋ ಆಸೆ ಅದಕ್ಕೆ ಬಂದಿದ್ದೆ. ಮನೆಯಲ್ಲಿ ಅಡುಗೆ ಮಾಡ್ದೆ ಊಟ ಇಲ್ಲದೆ ಹಸಿದ ನನ್ನ ಗಂಡ ಹೊಡೆದ್ರು. ಪಾಪ ಅವರೂ ಹಸಿದುಕೊಂಡು ಇದ್ರು ಏನ್ ಮಾಡ್ತಾರೇ ಅಂದ್ರು, ಓಬ್ಬಾಕೆ.



"ಏನೋ ನಾಳೆ ದಿನ ನಮ್ಮ ಸಂಬಳ ಜಾಸ್ತಿ ಆಗುತ್ತೆ ಅನ್ನೋ ಆಸೆಯಿಂದ ನಾವು ಈ ಹೋರಾಟಕ್ಕೆ ಬರ್ತೀದ್ದೀವಿ. ನಮಗೆಲ್ಲಾ ಯಾವುದೇ ಕಾನೂನು, ದೊಡ್ಡರ ಜೊತೆ ಮಾತನಾಡೋಕೆ ಬರಲ್ಲ ಹೇಗಾದ್ರು ಮಾಡಿ ನಮಗೆ ಸಂಬಳ ಜಾಸ್ತಿ ಆಗೋ ತರ ಮಾಡ್ರಿ ನಿಮಗೆ ಕೈ ಮುಗಿತೀವಿ" ಅಂತಾರೆ, ಆ ಮುಗ್ಧ ಪೌರಕಾರ್ಮಿಕರು.

* * *

ನನಗೆ 40 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದೆ ಅಮ್ಮ. ಈ ಓನರ್‌ಗಳು ಬರ್‍ತಾರೆ. "ಬಂದು ಏನೇ ಲೋಪರ್‌ಮುಂಡೆ ಏನೇ ಮಾಡ್ತಾ ಇದ್ದಿಯಾ? ಮಾಡೋದು 4 ಗಂಟೆಗಳ ಕೆಲಸ ಅದ್ರಲ್ಲೂ ಹೋಗಿ ಅಲ್ಲಿ ಇಲ್ಲಿ ಕುಳುತು ಕೊಳ್ಳುತ್ತಿದ್ದೀಯಾ ಏನಕ್ಕೆ ಕೆಲ್ಸಕ್ಕೆ ಬರ್ತೀರಾ ಹೋಗಿ ಮನೆಯಲ್ಲಿ ಮಲಕ್ಕೊಳ್ಳೊದು ಬಿಟ್ಟು" ಅಂತಾರೆ ಅಮ್ಮ ಅವರ ವಯಸ್ಸು ನನ್ನ ಮಕ್ಕಳ ವಯಸ್ಸು. ಮನಸ್ಸಿಗೆ ತುಂಬಾ ನೋವಾಗುತ್ತೆ ಹಿರಿಯರು-ಕಿರಿಯರು ಅನ್ನೋ ಮಾನ ಮರ್ಯಾದೆನೇ ಇಲ್ಲ ನನ್ನ ಮಕ್ಕಳು ಈ ರೀತಿ ಮಾತೋಡಲ್ಲ ನನಗೆ ಇಷ್ಟವೇ ಇಲ್ಲ ಈ ಕೆಲ್ಸ ಮಾಡೋಕೆ ಆದ್ರೆ ಹೊಟ್ಟೆ ಪಾಡಿಗಾಗಿ ಅವರು ಅಂದಹಾಗೆ ಕೇಳಿಕೊಂಡು ಕೆಲ್ಸ ಮಾಡ್ತಾ ಇದ್ದೀವಿ" ಅಂದ್ರು ಅಚ್ಚಮ್ಮ.

* * *

ಬೆಳಗ್ಗೆ ಕೆಲ್ಸಕ್ಕಾಗಿ ಮನೆ ಬಿಡುವಾಗ ಸುಮಾರು 5-30 ಅಥವಾ 6-00ಕ್ಕೆ ಆ ವೇಳೆಗೆ ರಸ್ತೆಗಳಲ್ಲಿ ಜನರು ಯಾರು ಓಡಾಡುತ್ತಿರುವುದಿಲ್ಲ. ಕತ್ತಲು-ಕತ್ತಲು ಇರುತ್ತೆ ಆ ಸಮಯದಲ್ಲಿ ನಮಗೆ ಈ ಬೀದಿ ನಾಯಿಗಳ ಕಾಟ ಹೆಚ್ಚಾಗಿರುತ್ತೆ. ಎಷ್ಟೊ ಜನರಿಗೆ ನಾಯಿ ಕಡಿದಿದೆ. ಒಬ್ಬರಿಗೆ 10 ಬಾರಿ ನಾಯಿ ಕಚ್ಚಿದೆ. ಆ ಸಮಯದಲ್ಲಿ ಹೆದರಿಕೊಂಡು ಆ ಕಡೆ ಈಕಡೆ ನೋಡಿ ಕೊಂಡು ಕಸ ಗುಡಿಸ್ತೀವಿ ಯಾವ ಕಡೆಯಿಂದ ನಾಯಿಗಳು ಬರುತ್ವೋ ಯಾರಿಗೆ ಗೊತ್ತು. ಅದರ ಚಿಕಿತ್ಸೆಗೆ ದುಡ್ಡಿದ್ರೆ ಪರವಾಗಿಲ್ಲ. ನಮಗೆ ತಿನ್ನೋಕೆ ಸಾಕಾಗಲ್ಲ ಇನ್ನು ಇದಕ್ಕೆ ಬ್ಯಾರೆ ಎಲ್ಲಿ ಹೋಗೋಣ ಎಂದರು ಒಬ್ಬ ಪೌರಕಾರ್ಮಿಕ ಹೆಂಗಸು.

ಇವರ ಸ್ಮರಣಾರ್ಥ



ಬೆಂಗಳೂರು ಮಹಾನಗರ ಪಾಲಿಕೆ

ಮಾನ್ಯರೆ,

6,000 ಗುತ್ತಿಗೆ ಪೌರ ಕಾರ್ಮಿಕರನ್ನು ದುಡಿಸಿಕೊಂಡು ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರಕ್ಕೆ ಈಡಾಗಿ ಒಂದು ದಶಕದ ಹಿಂದೆಯೇ ಇಹಲೋಕ ತ್ಯಜಿಸಿದ ಬೆಂಗಳೂರು ಮಹಾನಗರ ಪಾಲಿಕೆಯ ಶವಯಾತ್ರೆಗೆ ದಯವಿಟ್ಟು ಬನ್ನಿ.

"ನಮ್ಮ ದುಃಖಕ್ಕೆ ಸದಾ ಕಾರಣರಾಗಿರುವ ನೀವು ಇಂದು ನಮ್ಮ ಮಧ್ಯೆ ಇಲ್ಲದಿದ್ದರೂ ಸಾರ್ವಜನಿಕ ಮೊಕದ್ದಮೆಗಳಲ್ಲಿ (ನಮ್ಮ ಮನಸ್ಸಿನಲ್ಲಿ) ಶಾಶ್ವತವಾಗಿ ನೆಲೆಸಿರುವಿರಿ"

ಇದೇ ಫೆಬ್ರುವರಿ ತಿಂಗಳ ದಿನಾಂಕ 11 ರಂದು ಮಧ್ಯಾಹ್ನ 4-30 ಗಂಟೆಗೆ ಬೆಂಗಳೂರು ನಗರ ಕಾರ್ಪೋರೇಷನ್ ಕಛೇರಿಯಿಂದ ಕೆ. ಆರ್. ವೃತ್ತದವರೆಗೆ ನಡೆಯುವ ಶವಯಾತ್ರೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

ಸ್ಮರಣಾರ್ಥಿಗಳು

ಗುತ್ತಿಗೆ ಪೌರ ಕಾರ್ಮಿಕರ ಬೆಂಬಲ ಗುಂಪು

ಬೆಂಗಳೂರು ಮಹಾನಗರ ಪಾಲಿಕೆ ಶವಯಾತ್ರೆ

ಕನಿಷ್ಠ ವೇತನ, ಕೆಲಸದ ಭದ್ರತೆ ಇನ್ನು ಹಲವಾರು ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿರುವ ಗುತ್ತಿಗೆ ಪೌರ ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ ಹಲವಾರು ಮಹಿಳಾ ಗುಂಪುಗಳು, ಮಾನವಹಕ್ಕುಗಳ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಎನ್.ಜಿ.ಓ.ಗಳು ಸಾಮಾಜಿಕ ಕಾಳಜಿಯುಳ್ಳ ಸಿನಿಮಾ, ಸಾಹಿತ್ಯ, ಕಲೆಯ ಕ್ಷೇತ್ರಗಳ ಗಣ್ಯ ವ್ಯಕ್ತಿಗಳು ಫೆಬ್ರುವರಿ 11 ರಂದು ಭಿನ್ನವಾದ ಪ್ರತಿಭಟನೆ ಮೆರವಣಿಗೆ ನಡೆಸಿದರು.

ಕಾರ್ಮಿಕರ ಕಾನೂನಿನ ಪ್ರಕಾರ ಪಾಲಿಕೆಯು ಗುತ್ತಿಗೆ ಪೌರ ಕಾರ್ಮಿಕರಿಗೆ ನೀಡಬೇಕಾಗಿದ್ದ ಕನಿಷ್ಠ ವೇತನವನ್ನು ನೀಡದಿರುವಂತಹ ಪ್ರಧಾನ ಉದ್ಯೋಗ ಸಂಸ್ಥೆಯ ಅನ್ಯಾಯವನ್ನು ಈ ಸಂದರ್ಭದಲ್ಲಿ ಎತ್ತಿ ಹಿಡಿಯಲಾಯಿತು. ಸಾರ್ವಜನಿಕ ಸಂಸ್ಥೆಯಾಗಿ ಪೌರ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಬೇಕಿರುವ ಪಾಲಿಕೆಯ ಕಾನೂನು ವ್ಯವಸ್ಥೆ ನಿಷ್ಕ್ರಿಯವಾಗಿರುವ ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ಬೆಂ.ಮ. ಪಾಲಿಕೆಯ ಶವಯಾತ್ರೆಯನ್ನು ಮೆರವಣಿಗೆಯಲ್ಲಿ ನಡೆಸಲಾಯಿತು.

ಕಾರ್ಪೊರೇಷನ್ ಕಛೇರಿಯಿಂದ ಹೊರಟ ರ್‍ಯಾಲಿಯಲ್ಲಿ "ಗುತ್ತಿಗೆ ಪೌರ ಕಾರ್ಮಿಕರಿಗೆ ಈಗಲೇ ಕನಿಷ್ಠ ವೇತನ ನೀಡಿ", "ಬೆಂಗಳೂರು ಮಹಾನಗರ ಪಾಲಿಕೆಯ ಗುತ್ತಿಗೆದಾರರ ಭ್ರಷ್ಟಚಾರಕ್ಕೆ ಧಿಕ್ಕಾರ, ಧಿಕ್ಕಾರ!", "ಬೆಂಗಳೂರು ಹೈಟೆಕ್ ನಗರ, ಲೋಟೆಕ್ ಕೂಲಿ", "ಹೋರಾಟ ನಿರತ ಗುತ್ತಿಗೆ ಪೌರ ಕಾರ್ಮಿಕರ ಎಲ್ಲಾ ಬೇಡಿಕೆಗಳನ್ನು ಈಡೇರಿಸಿ", ಈ ಘೋಷಣೆಗಳು ಮುಗಿಲು ಮುಟ್ಟಿದ್ದವು. ಗ್ಯಾಸ್ ಕಾಲೇಜ್ ಬಳಿ ಪ್ರತಿಭಟನಾಗಾರರನ್ನು ಪೊಲೀಸರು ತಡೆ ಹಿಡಿದಾಗ, ದಾರಿಯಲ್ಲೇ ಧರಣಿ ಕುಳಿತು, ಘೋಷಣೆ ಕೂಗಿದರು.

ನಂತರ ಬೆಂಬಲ ಗುಂಪಿನ ಪ್ರತಿನಿಧಿಗಳು ಸವಿಸ್ತಾರ ಮನವಿ ಪತ್ರವನ್ನು ಕಾರ್ಮಿಕ ಮಂತ್ರಿ ಶ್ರೀ ಹಿಂಡಸಗೇರಿ ಅವರಿಗೆ ನೀಡಿದರು. ಮಧ್ಯಂತರ ವೇತನ 1,550/- ರೂ.ಗಳನ್ನು ಕೂಡಲೇ ನೀಡಬೇಕೆಂದು ಪ್ರತಿನಿಧಿಗಳು ಮಂತ್ರಿಯವರಲ್ಲಿ ಒತ್ತಾಯಿಸಿದರು.

ಕಾರ್ಮಿಕ ಮಂತ್ರಿ ಶ್ರೀ ಹಿಂಡಸಗೇರಿ ಅವರು, ಬೆಂ.ಮ.ಪಾ. ಆಯುಕ್ತರ, ಕಾರ್ಮಿಕ ಇಲಾಖೆ ಹಾಗೂ ನಗರಾಭಿವೃದ್ಧಿ ಮಂತ್ರಿಗಳ ಸಭೆಯನ್ನು ತಮ್ಮ ಕಚೇರಿಯಲ್ಲಿ ಕರೆಯುವುದಾಗಿ; ವೇತನ ನೀಡುವುದಲ್ಲಿರುವ ತೊಂದರೆಗಳನ್ನು ನಿವಾರಿಸುವುದಾಗಿ ಭರವಸೆ ನೀಡಿದರು. ಪಿ.ಯು.ಸಿ.ಎಲ್.ನ ಪ್ರೊ. ಹಸನ್ ಮನ್ಸೂರ್, ಕಾರ್ಮಿಕ ಮುಖಂಡ ಕಾಮ್ರೇಡ್ ಬಾಲಕೃಷ್ಣನ್, ಪತ್ರಕರ್ತೆ ಡಾ|| ವಿಜಯಮ್ಮ, ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ, ವಿಧಾನ ಪರಿಷತ್ ಸದಸ್ಯ ಎಲ್. ಹನುಮಂತರಾಯ, ಚಿತ್ರನಟ ಜಿ. ಕೆ. ಗೋವಿಂದರಾವ್, ಮಾನಸದ ಹೆಚ್. ಎಸ್. ರಾಜೇಶ್ವರಿ, ದಲಿತ ಹೋರಾಟಗಾರ ಓ. ಶ್ರೀಧರನ್, ಪಿ.ಡಿ.ಎಫ್.ನ ಪ್ರೊ. ನಗರಿಬಾಬಯ್ಯ, ಕೆನರಾ ಬ್ಯಾಂಕ್‌ನ ಎಸ್.ಸಿ./ಎಸ್.ಟಿ. ಸಂಘದ ಅಧ್ಯಕ್ಷ ಪುರುಷೋತ್ತಮದಾಸ್, ಮಾತಂಗದ ಚಿಕ್ಕಣ್ಣ, ವಕೀಲ ನಾರಾಯಣಸ್ವಾಮಿ, ಬಿ.ಎಸ್.ಪಿ.ಯ ಟಿ. ಮುನಿಯಪ್ಪ, ಪತ್ರಕರ್ತ ಪ್ರಹ್ಲಾದ್ ಬೆಟಗೇರಿ ಹಾಗೂ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಪಾರ್ಥಸಾರಥಿ ಕಾರ್ಮಿಕ ಮುಖಂಡ ಅನಂತ ಸುಬ್ಬರಾವ್ ಮತ್ತಿತರು ಬೆಂಬಲ ಗುಂಪಿನ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ●

ಸಹೃದಯರಲ್ಲಿ ಒಂದು ಮನವಿ

"ಇದು ಸಿಂಗಪುರವಾಗಲು ಹೊರಟಿರುವ ಬೆಂಗಳೂರಿನ ಸ್ವಚ್ಛತೆಯ ಹೊಣೆ ಹೊತ್ತ ಗುತ್ತಿಗೆ ಪೌರ ಕಾರ್ಮಿಕರ ಪಾಡು. ದೇಶದಲ್ಲೇ ಉದ್ಯಾನ ನಗರಿ ಎಂದು ಕರೆಸಿಕೊಳ್ಳುವ ಹೆಗ್ಗಳಿಕೆ ಬೆಂಗಳೂರಿನದು. ಪರಿಸರ ಹೆಚ್ಚೆಚ್ಚು ಹಾಳಾಗುತ್ತಿರುವ ಸಂದರ್ಭದಲ್ಲೂ ಕೂಡ ಹಲವಾರು ಉದ್ಯಾನವನಗಳು, ಸ್ವಚ್ಛರಸ್ತೆಗಳು, ಮಾರುಕಟ್ಟೆಗಳು, ಸ್ವಚ್ಛವಾಸಸ್ಥಳಗಳು ಇರುವ ನಗರವಿದು. ನಗರ ಪಾಲಿಕೆಗಳಲ್ಲಿ ಬೆಂಗಳೂರಿನದು ಮಾದರಿ ಪಾಲಿಕೆ ಎನಿಸಿಕೊಂಡಿದೆ. ದುರಂತವೆಂದರೆ ನಗರವನ್ನು ಸ್ವಚ್ಛಗೊಳಿಸುವ, ಸುವ್ಯವಸ್ಥಿತವಾಗಿಡುವುದರ ಹೊರೆ ಬಿದ್ದಿರುವುದು 6000 ಗುತ್ತಿಗೆ ಪೌರ ಕಾರ್ಮಿಕರ ಬೆನ್ನ ಮೇಲೆ.



ಸ್ವಚ್ಛತೆಯ ಕೆಲಸವನ್ನು ಗುತ್ತಿಗೆಗೆ ನೀಡಿ ದಶಕವೇ ಕಳೆದಿವೆ. ಮಹಿಳೆಯರು ರೂ. 800-900/-, ಪುರುಷರು ರೂ. 1000-1100/-ನ್ನು ವೇತನವಾಗಿ ಪಡೆಯುತ್ತಾರೆ. ಇಂತಹ ಕೆಲಸಕ್ಕೆ ಸಿಗಬೇಕಾದ ಕನಿಷ್ಟ ವೇತನ ರೂ. 2146/- ರ ಅರ್ಧಕ್ಕಿಂತಲು ಕಡಿಮೆ ವೇತನವನ್ನು ಪಡೆಯುತ್ತಿದ್ದಾರೆ.

ಗುತ್ತಿಗೆ ಕಾರ್ಮಿಕರ ಕಾಯ್ದೆಗನುಸಾರವಾಗಿ ಸಿಗಬೇಕಾದ ಯಾವ ಸೌಲಭ್ಯಗಳಾಗಲಿ, ರಕ್ಷಣೆಯಾಗಲಿ ಇಲ್ಲದೆ, ಕಲುಷಿತ, ಅಪಾಯಕಾರಿ ವಾತಾವರಣದಲ್ಲಿ ಕಾರ್ಮಿಕರು ಕೆಲಸ ಮಾಡುತ್ತಾರೆ. ಒಂದೇ ಒಂದು ದಿನದ ರಜೆಯ ಸೌಲಭ್ಯವಿಲ್ಲದೆ ವರ್ಷ ಪೂರ್ತಿ ದುಡಿಯುತ್ತಾರೆ. ಸಣ್ಣ ಮಕ್ಕಳಿರುವ ಮಹಿಳೆಯರು ಮಕ್ಕಳನ್ನು ಎತ್ತಿಕೊಂಡುಬಂದು, ಧೂಳು, ಗಲೀಜಿನ ವಾತಾವರಣದಲ್ಲಿ ಮಕ್ಕಳೊಂದಿಗೆ ಕೆಲಸ ಮಾಡುತ್ತಾರೆ. ಗುತ್ತಿಗೇದಾರರ ಸಹಾಯಕರಿಂದ ಎಲ್ಲ ರೀತಿಯ ಶೋಷಣೆಯನ್ನು ಅನುಭವಿಸುತ್ತಾರೆ. ಕಾರ್ಮಿಕರ ಪರಿಸ್ಥಿತಿಯ ಬಗ್ಗೆ ಗಮನ ಹರಿಸಬೇಕಾದ ಜವಾಬ್ದಾರಿ ಹೊತ್ತ ಪಾಲಿಕೆಯ ಅಧಿಕಾರಿಗಳು ಯಾವಾಗಲೂ ಅಲಭ್ಯ.

ಗುತ್ತಿಗೆ ಪೌರಕಾರ್ಮಿಕರಲ್ಲಿ ಹೆಚ್ಚಿನಂಶ ಎಲ್ಲರೂ ದಲಿತರು. ಅವರಲ್ಲಿ ಶೇಕಡ 80 ರಷ್ಟು ಕೆಲಸಗಾರರು ಮಹಿಳೆಯರು ಎಂಬುದು ಗಮನಾರ್ಹ ಅಂಶ. ಎಲ್ಲಾ ರಾಜಕೀಯ ಪಕ್ಷಗಳು, ಸರ್ಕಾರಿ ಸಂಸ್ಥೆಗಳು ದಲಿತೋದ್ಧಾರದ ಕುರಿತು ಮಾತನಾಡುವಾಗ ಸರ್ಕಾರಿ ಸಂಸ್ಥೆಯಡಿಯಲ್ಲಿ ದುಡಿಯುವ ಕಾರ್ಮಿಕರೇ ಶೋಷಣೆಗೊಳಗಾಗುತ್ತಿರುವುದು ಖಂಡನಾರ್ಹ.

ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು, ಅಮಾನವೀಯ, ಕೊಳಕು ವ್ಯವಸ್ಥೆಯನ್ನು ಸರಿಪಡಿಸಲು ಕಾರ್ಮಿಕರು ಹಲವಾರು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅವರ ಈ ಪ್ರಯತ್ನಗಳು, ರಾಜಕೀಯ ಬಲವುಳ್ಳ ಗುತ್ತಿಗೆದಾರರು ಮತ್ತು ಭ್ರಷ್ಟ ಪಾಲಿಕೆ ಅಧಿಕಾರಿಗಳಿಗೆ ತೊಡಕಾಗಿದೆ. ಗುತ್ತಿಗೆ ಪದ್ಧತಿಯಲ್ಲಿನ ಭ್ರಷ್ಟಾಚಾರ ಎಲ್ಲರಿಗೂ ತಿಳಿದಿರುವ ಗುಟ್ಟಾಗಿದೆ!

ಹೆಚ್ಚಿನ ಗುತ್ತಿಗೆ ಪೌರ ಕಾರ್ಮಿಕರನ್ನೊಳಗೊಂಡಿರುವ, ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆ ಪೌರಕಾರ್ಮಿಕರ ಸಂಘವು ಎಲ್ಲಾ ಅಡೆತಡೆಗಳನ್ನು ಎದುರಿಸುತ್ತಲೇ ಬಂದಿದೆ. ಕನಿಷ್ಟ ವೇತನಕ್ಕೆ ಒತ್ತಾಯಿಸಿ ಹಲವಾರು ವಾರ್ಡುಗಳಲ್ಲಿ ಕಾರ್ಮಿಕರು 2 ತಿಂಗಳಿನಿಂದ ವೇತನವನ್ನೆ ತೆಗೆದುಕೊಳ್ಳದೆ ಕೆಲಸ ಮಾಡುತ್ತಿದ್ದಾರೆ. ಸಂಘದ ಹೋರಾಟ ನಡೆಯುತ್ತಿದ್ದ ಸಂದರ್ಭದಲ್ಲೂ ಸಹ ಕಾರ್ಮಿಕರು ಕೆಲಸ ನಿಲ್ಲಿಸದೆ, ನಗರದ ಸೌಂದರ್ಯ, ಸ್ವಚ್ಛತೆಗೆ ಧಕ್ಕೆಯಾಗದಂತೆ ನೋಡಿಕೊಂಡಿದ್ದಾರೆ. ಸ್ವಚ್ಛ ಬೆಂಗಳೂರಿಗಾಗಿ ಹೋರಾಡುವವರು ಸ್ವಚ್ಛತೆಯ ಹಿಂದಿರುವ ಕಾರ್ಮಿಕರ ಕಷ್ಟದ ದುಡಿಮೆ, ಪ್ರಾಮಾಣಿಕತೆಯನ್ನು ಮನಗಾಣಬೇಕು. ನಿರಂತರ ಹೋರಾಟದಿಂದಾಗಿ ಆಯುಕ್ತರು, ಕಾರ್ಮಿಕ ಆಯುಕ್ತರು ಕಾರ್ಮಿಕರು ಬೇಡಿಕೆಗಳನ್ನು ಪೂರೈಸುವುದಾಗಿ, ನ್ಯಾಯ ದೊರಕಿಸಿಕೊಡುವುದಾಗಿ ಧರಣಿ ಕುಳಿತ ಕಾರ್ಮಿಕರೆದುರಿನಲ್ಲಿ ಸಾರ್ವಜನಿಕವಾಗಿ ಆಶ್ವಾಸನೆ ಇತ್ತಿದ್ದಾರೆ. ಆ ನಂತರವೂ ಪರಿಸ್ಥಿತಿ ಇನ್ನೂ ಸುಧಾರಿಸಿಲ್ಲ, ಕನಿಷ್ಠ ವೇತನ ಸಿಕ್ಕಿಲ್ಲ. ಆಮೆ ವೇಗದಲ್ಲಿ ನಡೆಯುವ ಭ್ರಷ್ಟ ವ್ಯವಸ್ಥೆಯಿಂದ ನ್ಯಾಯ ದೊರಕಿಸಿಕೊಳ್ಳುವುದು ಸಾಹಸವೇ ಸರಿ. ಯಾವುದಕ್ಕೂ ಕುಗ್ಗದೆ ಸಂಘವು ತನ್ನ ಹೋರಾಟವನ್ನು ತೀವ್ರಗೊಳಿಸಿದೆ.

ಅವರ ಈ ಹೋರಾಟವನ್ನು ಬೆಂಬಲಿಸಲು ಮಾನವ ಹಕ್ಕುಗಳ ಸಂಘಟನೆಗಳು, ಮಹಿಳಾ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಸರ್ಕಾರೇತರ ಸಂಸ್ಥೆಗಳು, ಕಾಳಜಿಯುಳ್ಳ ವ್ಯಕ್ತಿಗಳು ಒಂದಾಗಿ ಗುತ್ತಿಗೆ ಪೌರಕಾರ್ಮಿಕರ ಬೆಂಬಲ ಗುಂಪನ್ನು ರೂಪಿಸಲಾಗಿದೆ. ಕಾನೂನಿನ ಸಹಾಯ, ನೈತಿಕ, ಆರ್ಥಿಕ ಸಹಾಯವನ್ನು ಸಹೃದಯವುಳ್ಳ ಮತ್ತು ಮಾನವೀಯತೆಯ ಕಾಳಜಿಯುಳ್ಳವರು ನೀಡಿ ಸಂಘವನ್ನು ಬೆಂಬಲಿಸಬೇಕೆಂದು ಕಳಕಳಿಯಿಂದ ಕೋರುತ್ತೇವೆ. ●

ದಿನಚರಿ

ಗುತ್ತಿಗೆ ಪೌರಕಾರ್ಮಿಕಳಾದ ವನಜರವರ ದಿನಚರಿ ಈ ರೀತಿ ಇದೆ.

ನಾನು ಬೆಳಗ್ಗೆ 5-00 ಗಂಟೆಗೆ ಎದ್ದೇಳುತ್ತೇನೆ, ಹಾಲು ತಂದು, ಕಸ ಗುಡಿಸಿ ಟೀ ಮಾಡಿ ಮಕ್ಕಳಿಗೆ ಕೈಕಾಲು ಮುಖ ತೊಳೆಸಿ ಗಂಡ ಮಕ್ಕಳಿಗೆ ಕುಡಿಯಲು ಟೀ ಕೊಟ್ಟು ಕೆಲಸಕ್ಕೆ ಅಂತ ಮನೆ ಬಿಡುವ ವೇಳೆಗೆ 6-00 ಗಂಟೆಯಾಗಿರುತ್ತದೆ. ಕೆಲಸದ ಸ್ಥಳಕ್ಕೆ 6-30ರ ಒಳಗೆ ಹೋಗಿರುತ್ತೇನೆ. 6-30 ರಿಂದ 10-30ರ ವರೆಗೆ ಮೇಸ್ತ್ರಿಯು ಹೇಳಿದ ರಸ್ತೆಯನ್ನು ಗುಡಿಸುತ್ತೇನೆ. 10-30 ರಿಂದ 11-00 ಗಂಟೆಯವರೆಗೂ ಟೀಗಾಗಿ ಎಂದು ಬಿಟ್ಟಾಗ ಸ್ವಲ್ಪ ಎಲೆ ಅಡಿಕೆ ಹಾಕಿಕೊಂಡು ಸ್ವಲ್ಪ ವೇಳೆ ಕುಳಿತುಕೊಳ್ಳುತ್ತೇನೆ. ನಂತರ 11-00 ಗಂಟೆಗೆ ಸರಿಯಾಗಿ ಮತ್ತೆ ಕೆಲಸ ಮಾಡಲು ಪ್ರಾರಂಭಿಸಿ 1-30ಕ್ಕೆ ನಮ್ಮ ಪೊರಕೆ, ರೇಕ್, ಬಂಡಿಗಳನ್ನು ನಾವು ಕಸಗುಡಿಸುವ ಬೀದಿಯ ಒಂದು ಬೀದಿಯಲ್ಲಿ ಇಟ್ಟು ಅಲ್ಲಿಂದ 1-45ಕ್ಕೆ ಜಾಗ ಬಿಟ್ಟು ಮನೆಗೆ ಬರುವ ವೇಳೆಗೆ 2-30 ಸಮಯವಾಗಿರುತ್ತದೆ. ಬಂದು ಸ್ವಲ್ಪ ಕೈಕಾಲು ತೊಳೆದು, ನೀರು ಕುಡಿದು ಮತ್ತೆ 3-00 ಗಂಟೆಯಿಂದ 4-00 ಗಂಟೆಯುವರೆಗೂ ಮನೆ ಕೆಲಸಗಳಾದ, ಬಟ್ಟೆ ಒಗೆಯುವುದು, ಅಂಗಡಿಗೆ ಹೋಗುವುದು ಅರ್ಧ ಕಿಲೋಮೀಟರ್‌ನಿಂದ ನೀರು ತರುವ ಕೆಲಸ ಮಕ್ಕಳು ಶಾಲೆಯಿಂದ ಬರುವ ಒಳಗೆ ಅವರಿಗೆ ಸ್ವಲ್ಪ ಅನ್ನ ಮಾಡಿ ಇಡುತ್ತೇನೆ. ನಂತರ ಅಂಗಡಿಗೆ ಹೋಗಿ ಬಂದು ಮಕ್ಕಳಿಗೆ 4-30 ರಿಂದ 5-30ರವರೆಗೂ ಓದಿಸಲು ಕೂರಿಸುವುದು ಅವುಗಳಿಗೆ ನೀರು ಇತ್ಯಾದಿ ಒದಗಿಸುತ್ತೇನೆ. ನಂತರ 5-30ಕ್ಕೆ ಅಡುಗೆ ಮಾಡಲು ಪ್ರಾರಂಭಿಸಿ 8-30ಕ್ಕೆ ಮುಗಿಯುತ್ತದೆ. 8-30 ರಿಂದ 10-00ರ ವರೆಗೂ ಮಕ್ಕಳಿಗೆ, ಗಂಡ, ಅತ್ತೆ-ಮಾವನವರಿಗೆ ಊಟ ಬಡಿಸಿ, ಪಾತ್ರೆಗಳನ್ನೆಲ್ಲ ತೊಳೆದು, ಹಾಸಿಗೆಯನ್ನು ಹಾಸಿ ಮಲಗುವ ವೇಳೆಗೆ 10-30 ಆಗಿ ಹೋಗುತ್ತೆ. ಮತ್ತೆ ಬೆಳಗ್ಗೆ 5-00 ರಿಂದ ಎಂದಿನಂತೆ ನಮ್ಮ ಕೆಲಸದ ಚಕ್ರ ಪ್ರಾರಂಭವಾಗುತ್ತೆ.

✍ *ವನಜ*

ಈ ನಗರ ಒಂದು ತಿಪ್ಪೆ

ಕೈಯ್ಯಲ್ಲಿ ಕಸಪೊರಕೆ ನೆತ್ತಿಲಿ ಮಕ್ಕರಿ
ಹೊತ್ತು ಮೂಡುವ ಮೊದಲೇ
ಚುಕ್ಕೆ ಮಾಸುವ ಮೊದಲೇ
ಕಸಬಾಚಿ ಕಸವಾದ ಓ ಅಕ್ಕತಂಗಿಯರೇ
ನೀವೇನೇ ಈ ಲೋಕ ಬೆಳಗುವ ಚುಕ್ಕೆ
ನೀವಿಲ್ದೆ ಹೋದರೆ ಈ ನಗರ ಒಂದು ತಿಪ್ಪೆ

ಮುಂಜಾನೆ ಮಂಜಲ್ಲಿ ಮಾಗಿಯ ಚಳಿಯಲ್ಲಿ
ನಗರ ನಿದ್ರಿಸುವಾಗ ಕನಸು ಕರಗುವಾಗ
ತಬ್ಬೀದ ಕಂದನ್ನ ಒಬ್ಬಂಟಿ ಬಿಟ್ಟು
ಕವಿದ ಮಬ್ಬಿನಲ್ಲಿ ಕರಗಿ ಹೋಗುತ್ತೀರಿ
ಬೀದಿ ಬೀದಿ ಗುಡಿಸಿ ಬೆವರು ಹನಿಗಳ ಚೆಲ್ಲಿ
ಸೂರ್ಯನ ತೇರನ್ನೇ ಭೂಮಿಗೆಳೆದು ತರುತೀರಿ

ಕಸದ ರಾಶಿಯನ್ನೆ ಕೈ ಹಾಕಿ ಬಾಚುವಿರಿ
ಕೊಚ್ಚೆ ಬಚ್ಚಲಿಗಿಳಿದು ಬರಿಗೈಲೆ ಬಳಿಯುವಿರಿ
ಬಾಚಿ ಬಳಿಯುವಾಗ ಎತ್ತಿ ಒಯ್ಯುವಾಗ
ಒಡೆದ ಗಾಜಿನ ಚೂರು ಅಂಗ್ಯೆ ಅಂಗಾಲೊಕ್ಕು
ನೆಲಕೆ ಸುರಿದ ರಕ್ತ ರಂಗೋಲಿ ಬರೆದಿತ್ತು
ನೋವು ನೆತ್ತಿಗೇರಿ ಪ್ರಾಣವನೆ ಹಿಂಡಿತ್ತು

ಕೈ ಹಿಡಿದ ಗಂಡ ಮ್ಯಾನ್‌ಹೋಲ್ ಪಾಲಾದ
ಕೈಗೆ ಬಂದ ಮಗ ಕರೆಂಟಿಗೆ ಬಲಿಯಾದ
ಕಣ್ಣೀನ ಕನಸೆಲ್ಲಾ ಹಿಂಗಿಂಗಿ ಬತ್ತೀತು
ಬಾಳಿನ ಕತೆಯೆಲ್ಲಾ ಕಣ್ಣೀರ ಹೊಳೆಯಾಯ್ತು
ದೇಹಾದ ಕಸುವೆಲ್ಲಾ ದುಡಿಮೇಗೆ ಮುಡಿಪಾಯ್ತು
ಕುಲದಲ್ಲಿ ಕೀಳೆಂಬ ಹಣೆಪಟ್ಟಿ ನಿನಗಾಯ್ತು

ವರ್ಷಗಳೇ ಉರುಳಿದರೂ ನೀನಿನ್ನೂ ಕಂತ್ರಾಟು ಕೂಲಿ
ಎಷ್ಟೇ ದುಡಿದರೂ ಕೂಡ ನಿನ್ನ ತುತ್ತಿನ ಚೀಲ ಖಾಲಿ ಖಾಲಿ
ನಿನ್ನ ಎಂಜಲು ತಿಂದು ಕಂಟ್ರ್ಯಾಕ್ಟರ್ ಕೊಬ್ಬಿದ
ನಿನ್ನ ನಿತ್ಯ ಕಾಯಕದಿಂದ ಈ ನಗರ ಸಿಂಗಾರ
ನಿನ್ನ ಬೆವರಿನ ಬೆಲೆಯ ಇನ್ನಾದ್ರೂ ತಿಳಿಯಮ್ಮ
ಪೊರಕೆ ಬಾವುಟ ಹಿಡಿದು ಹೋರಾಡಿ ನೀ ಗೆಲ್ಲು

✍ *ಕೆ. ರಾಮಯ್ಯ*

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 50 ರೂ.

ಸಂಸ್ಥೆಗಳಿಗೆ : 100 ರೂ.

ಸಂ. ಮಂಡಳಿ

REGD No. CPMG/KA/BGE/289/2001

BOOK -POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067